ಉಪನ್ಯಾಸ
ಗ್ರಂಥಮಾಲೆ

೧೨೯

ಭಾರತೀಯ ಹಬ್ಬಗಳು

ಸಿ. ವ್ಹಿ. ಕೆರಿಮನಿ, ಎಂ. ಎ.

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಸಪ್ಟಂಬರ ೧೯೭೧

ಉಪನ್ಯಾಸ ಗ್ರಂಥಮಾಲೆ

೧೨೯

ಭಾರತೀಯ ಹಬ್ಬಗಳು

ಶ್ರೀ. ಸಿ. ವ್ಹಿ. ಕೆರಿಮನಿ, ಎಂ. ಎ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಸಪ್ಟಂಬರ, ೧೯೭೧

ಪ್ರಕಾಶಕರು :

ಎಸ್. ಎಸ್. ಒಡೆಯರ, ಎಂ. ಎ., ಎಲ್‌ಎಲ್.ಬಿ.
ರಜಿಸ್ಟ್ರಾರ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೩

ಪ್ರಥಮ ಮುದ್ರಣ : ಸಪ್ಟಂಬರ, ೧೯೭೧
೫,೦೦೦ ಪ್ರತಿಗಳು

ಬೆಲೆ : ೨೫ ಪೈಸೆ

ಮುದ್ರಕರು :

ಗೋಪಾಲ ಜೋಶಿ
ಗ್ರಂಥ ಮುದ್ರಣ,
ಮಂಗಳವಾರ ಪೇಟೆ,
ಧಾರವಾಡ–೧

ಮುನ್ನುಡಿ

ನಮ್ಮ ವಿಶ್ವವಿದ್ಯಾಲಯದ ವ್ಯಾಸಂಗ ವಿಸ್ತರಣ ವಿಭಾಗವು ಗ್ರಾಮಾಂತರ ಪ್ರದೇಶಗಳಲ್ಲಿ ಪ್ರತಿ ತಿಂಗಳು ಏರ್ಪಡಿಸುತ್ತಿರುವ ಉಪನ್ಯಾಸ ಶಿಬಿರಗಳು ದಿನೇ ದಿನೇ ಜನಪ್ರಿಯವಾಗುತ್ತ ಸಾಗಿರುವುದು ನಿಜವಾಗಿಯೂ ಸಂತೋಷದ ಸಂಗತಿ. ಈ ಜ್ಞಾನಪ್ರಸಾರದ ಕಾರ್ಯದಲ್ಲಿ ಭಾಗವಹಿಸುವದರಿಂದ ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕವೊದಗುವದಲ್ಲದೆ ಎಂಥ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗೂ ಅದನ್ನು ಸುಲಭವಾದ ಶೈಲಿಯಲ್ಲಿ ಬರವಣಿಗೆಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮನಮುಟ್ಟಿ ಸಹಕರಿಸುತ್ತಿರುವುದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೇ ೧೨೮ ಪುಸ್ತಕಗಳು ಪ್ರಕಟವಾಗಿವೆ. ಅವು ಅಚ್ಚಾಗಿ ಹೊರಬಂದೊಡನೆ ಅವುಗಳ ಸಾವಿರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಕಗಳು ಮೂರು-ನಾಲ್ಕು ಮುದ್ರಣಗಳನ್ನೂ ಕಂಡಿರುವುದು ಈ ಮಾಲೆಯ ಉಪಯುಕ್ತತೆಯನ್ನೂ ಜನಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯ ಧನಸಹಾಯ ಆಯೋಗದವರು ಉಪನ್ಯಾಸ ಶಿಬಿರಗಳಿಗೂ, ಈ ಪುಸ್ತಿಕೆಗಳ ಪ್ರಕಟನೆಗೂ ನೆರವು ನೀಡುತ್ತಿದ್ದು ಅವರಿಗೆ ವಿಶ್ವವಿದ್ಯಾಲಯವು ತನ್ನ ಕೃತಜ್ಞತೆಗಳನ್ನು ಸೂಚಿಸುತ್ತದೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖವಾದ ಪ್ರಗತಿಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ
೧೨-೯-೧೯೭೧

ಎ. ಎಸ್. ಅಡಕೆ
ಕುಲಪತಿ

ಅರಿಕೆ

ನಮ್ಮ ವಿಶ್ವವಿದ್ಯಾಲಯದ ೧೩೩ ನೆಯ ಉಪನ್ಯಾಸ ಶಿಬಿರವು ನಡೆದಾಗ 'ಭಾರತೀಯ ಹಬ್ಬಗಳು' ಎಂಬ ವಿಷಯವಾಗಿ ವಿಜಾಪುರ ಜಿಲ್ಲೆಯ ಕೆರೂರಲ್ಲಿ ನಾನು ಮಾಡಿದ ಉಪನ್ಯಾಸವನ್ನು ಈ ಕಿರುಹೊತ್ತಿಗೆಯಲ್ಲಿ ಬರೆಯಲು ಪ್ರಯತ್ನಿಸಲಾಗಿದೆ.

ಹಿಂದೂ ಧರ್ಮದ ನೆಲೆಗಟ್ಟಿನ ಮೇಲೆ ನಿಂತಿರುವ ಹಬ್ಬ ಹುಣ್ಣಿಮೆಗಳು, ಜಯಂತಿಗಳು ನಮ್ಮ ಸಂಸ್ಕೃತಿಯನ್ನು, ಆದಿಕಾಲ ದಿಂದಲೂ ನಡೆದು ಬಂದ ಐತಿಹಾಸಿಕ, ಪೌರಾಣಿಕ ಹಿನ್ನೆಲೆಯನ್ನು ಸೂಚಿಸುತ್ತವೆ. ಇವು ಇಹದಲ್ಲಿ ಸವಿಬದುಕನ್ನು ಹೊಂದಿ, ಪರದಲ್ಲಿ ಮುಕ್ತಿಹೊಂದಲು ಬೇಕಾಗುವ ಸಾಧನೆಯನ್ನು ಸೂಚಿಸುವ ಮೈಲು ಗಲ್ಲುಗಳಾಗಿವೆ.

ಎಷ್ಟೋ ಪ್ರದೇಶಗಳಲ್ಲಿ ಈ ಹಬ್ಬ ಹರಿದಿನಗಳನ್ನು ಆಚರಿಸು ವಲ್ಲಿ ವೈವಿಧ್ಯವಿದ್ದರೂ ಅವುಗಳಲ್ಲಿ ಭಾರತೀಯತೆಯ ಏಕತೆ ಇದೆ ಎಂದು ತೋರಿಸುವದೆ ನನ್ನ ಈ ಪುಸ್ತಿಕೆಯ ಉದ್ದೇಶವಾಗಿದೆ. ಇದನ್ನು ಸಿದ್ಧಪಡಿಸುವಾಗ ಅನೇಕ ಗ್ರಂಥಗಳನ್ನು ಓದುವ ಸೌಭಾಗ್ಯ ಪ್ರಾಪ್ತವಾಯಿತು. ಪ್ರಾಚೀನ ಕಥೆಗಳನ್ನು ಇಂದಿನ ರೀತಿಗೆ ಮತ್ತು ವಿಚಾರಕ್ಕೆ ಹೊಂದಿಕೊಳ್ಳುವಂತೆ ಅಳವಡಿಸಿ ಕೊಳ್ಳುವ ಒಂದು ಪ್ರೇರಣೆ ದೊರೆಯಿತು. ಅಲ್ಲಲ್ಲಿ ಪೌರಾಣಿಕ ಕಥೆ

ಗಳನ್ನು ನೀಡಿ ಅದರ ಮಹತ್ವದ ಕಡೆಗೆ ವಾಚಕರ ಗಮನವನ್ನು ಸೆಳೆಯಲು ಪ್ರಯತ್ನಿಸಿದ್ದೇನೆ. ಅವುಗಳ ಪೂಜನ, ಪಾಠ, ಆಚರಣೆ ಹಾಗೂ ಸಂತಸದಿಂದ ಇರುವ ಬಗೆ ಇವುಗಳಿಗೆ ಹೆಚ್ಚು ಆದ್ಯತೆ ನೀಡಿ ಬರೆಯಲಾಗಿದೆ. ಆದರೆ ನನ್ನ ಅಲ್ಪ ಪ್ರಯತ್ನ ಎಷ್ಟರ ಮಟ್ಟಿಗೆ ಸಫಲವಾಗಿದೆಯೆಂಬುದನ್ನು ಸಹೃದಯ ವಾಚಕ ವೃಂದವೇ ನಿರ್ಧರಿಸಬೇಕು.

ಈ ಪುಸ್ತಕ ಬರೆಯಲು ಪ್ರೇರಿಸಿದ ಪ್ರಕಟನ ವಿಭಾಗದ ನಿರ್ದೇಶಕರಾದ ಶ್ರೀಯುತ ಚೆನ್ನವೀರ ಕಣವಿ ಮತ್ತು ಹಸ್ತಪ್ರತಿಯನ್ನು ಓದಿ ಅಮೂಲ್ಯ ಸಲಹೆಗಳನ್ನಿತ್ತ ಡಾ. ಎಂ. ಎಸ್. ಸುಂಕಾಪೂರ ಇವರುಗಳಿಗೆ ನನ್ನ ಹೃತ್ಪೂರ್ವಕ ಧನ್ಯವಾದಗಳು.

ಉಪನ್ಯಾಸ ಮಾಡಲು ಅವಕಾಶವಿತ್ತು ಅದನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿದ ನಮ್ಮ ವಿಶ್ವವಿದ್ಯಾಲಯದ ಅಧಿಕಾರಿಗಳಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

ಮುನಸಿಪಲ್ ಆರ್ಟ್ಸ ಕಾಲೇಜ
ಲಕ್ಷ್ಮೇಶ್ವರ. ಸಿ. ವ್ಹಿ. ಕೆರಿಮನಿ
ಬಸವ ಜಯಂತಿ, ೧೯೭೧

ಪರಿವಿಡಿ

ಹಬ್ಬಗಳ ಪೂರ್ವ ಪರಿಚಯ

ಹಬ್ಬವೆಂದರೆ ಸಂತೋಷದ ಸಮಾರಂಭ. ಸಂಸ್ಕೃತ ಪರ್ವನ್ (ಪರ್ವ) ಶಬ್ದದ ತದ್ಭವವೇ ಹಬ್ಬ. ಮನುಷ್ಯನ ಮೇಲೆ ಇರುವ ದೇವಋಣ, ಪಿತೃಋಣ, ಋಷಿಋಣಗಳನ್ನು ತೀರಿಸುವ ವಿಧಾನಗಳೇ ಈ ಹಬ್ಬಗಳು. ಜನಾಂಗದ ಐಹಿಕ ಸುಖಸಾಧನೆಗೆ ನೆರವಾಗುವದು ಹಬ್ಬದ ಒಂದು ಮುಖ; ಮತ್ತೊಂದು ಮುಖವೆಂದರೆ ಮೋಕ್ಷ ಸಾಧನೆಗಾಗಿ ಹಬ್ಬಗಳನ್ನು ಆಚರಿಸುವದು.

ಉತ್ಸವಪ್ರಿಯ ಮನುಷ್ಯ :

ಹಿಂದುಗಳಿಗೆ ಹಬ್ಬವೆಂದರೆ ಬಲು ಉಬ್ಬು. ಒಂದೊಂದು ಹಬ್ಬವು ಆ ಋತುವಿನ ಇಲ್ಲವೆ ಆ ಮಾಸದ ಅಲ್ಲದೆ ಇಷ್ಟ ದೇವತೆಗೆ ಸಂಬಂಧಿಸಿದ ದಿನವೇ ಆಗಿರುತ್ತದೆ. ಪ್ರತಿಯೊಂದು ಹಬ್ಬವೂ

ಒಂದೊಂದು ಸತ್‌ಸಂಪ್ರದಾಯವನ್ನು ಹೊಂದಿದೆ. ಅವುಗಳ ಸುತ್ತಲೂ ಅನೇಕ ದಂತಕತೆ, ಪೌರಾಣಿಕ ಹಿನ್ನೆಲೆಗಳು ಹೆಣೆದು ಕೊಂಡಿವೆ. ಇವುಗಳ ಆಚರಣೆ ಒಂದು ದೃಷ್ಟಿಯಲ್ಲಿ ಶಾಸ್ತ್ರೋಕ್ತವೂ ಮತ್ತು ವೈಜ್ಞಾನಿಕವೂ ಆಗಿದೆ. "ಉತ್ಸವ ಪ್ರಿಯಾ ಹಿ ಮನುಷ್ಯಾಃ" ಎಂದು ಕಾಳಿದಾಸನು ತನ್ನ ವಿಕ್ರಮೋರ್ವಶೀಯದಲ್ಲಿ ಹೇಳಿದಂತೆ ಸಕಲ ಮಾನವರಿಗೂ ಉತ್ಸವವು ಪ್ರಿಯವಾದದ್ದು.

ಮಾನವನು ಸೌಖ್ಯಕ್ಕಾಗಿ, ಸೌಂದರ್ಯಕ್ಕಾಗಿ, ಮನರಂಜನೆಗಾಗಿ, ಬಾಳಿನ ಬದಲಾವಣೆಗಾಗಿ, ಸಾಧನೆಯಿಂದ ಸಿದ್ಧಿಗಾಗಿ, ಸಂಸಾರದಿಂದ ಸನ್ಮಾರ್ಗಕ್ಕಾಗಿ, ಆತ್ಮೀಯರನ್ನು ಕೂಡಿಕೊಳ್ಳುವದಕ್ಕಾಗಿ ಮತ್ತು ಸಂಘಟನೆಗಾಗಿ ಈ ಹಬ್ಬಹರಿದಿನಗಳನ್ನು ಆಚರಣೆಯಲ್ಲಿ ತಂದಿದ್ದಾನೆ. ಬೇರೆ ಬೇರೆ ನಾಡುಗಳಲ್ಲಿ ಮತ್ತು ಪಂಗಡಗಳಲ್ಲಿ ಆಚರಣೆಯು ವೈವಿಧ್ಯತೆಯಿದೆ. ಹಿಂದಿನ ಕಾಲದಲ್ಲಿ ಹಬ್ಬಗಳನ್ನು ಆಚರಿಸುವದು ಕೇವಲ ದೇವರಿಗೆ ಕೃತಜ್ಞತೆ ಸಲ್ಲಿಸುವದಕ್ಕಿಂತಲೂ ಭಯದಿಂದ ಹಲವು ದೇವತೆಗಳನ್ನು ಪೂಜಿಸುವದಾಗಿತ್ತು. ಸಮಾಜದಲ್ಲಿ ವರ್ಣಾಶ್ರಮ ಧರ್ಮಗಳನ್ನು ಅನುಸರಿಸಿ ಆರಾಧ್ಯ ದೇವತೆಗಳು, ಸಾಕಾರಮೂರ್ತಿ ಪೂಜೆಗಳು ನಡೆಯುತ್ತಿದ್ದವು. ಮೂಢ ನಂಬಿಕೆಯಿಂದ ದೇವತೆಗಳ ಸಂಖ್ಯೆ ಒಂದಕ್ಕೆ ನೂರಾಗಿ, ನೂರಕ್ಕೆ ಸಾವಿರವಾಗಿ ಕೋಟಿಗಟ್ಟಲೆ ಬೆಳೆದು ನಿಂತು ಅನೇಕ ನರಬಲಿ, ಪಶುಬಲಿಗಳು ಆಗುತ್ತಿದ್ದವು. ಮೂಢ ಮಾನವನು ಒಂದು ದೃಷ್ಟಿಯಿಂದ ದೇವತೆಗಳನ್ನು ಸಂತೃಪ್ತಿಗೊಳಿಸುವದಕ್ಕಾಗಿ ಏನುಬೇಕೆಲ್ಲವನ್ನು ಮಾಡಲು ಆರಂಭಿಸಿದನು. ಆದರೆ ಶತಮಾನಗಳು ಉರುಳಿದಂತೆ ಧರ್ಮದಲ್ಲಿ ಕ್ರಾಂತಿಯಾಗಿ.

ಮೂಢ ಭಕ್ತಿ ಮಾಯವಾಗಿ, ಅಂಧಾನುಕರಣೆ ನಶಿಸಿ ಹೋಗಿ, ಪ್ರಾಂಜಲ ಮನಸ್ಸಿನಿಂದ ಪೂಜಿಸುವದೆ ದೇವರ ಸಾನ್ನಿಧ್ಯವನ್ನು ಪಡೆದುಕೊಳ್ಳುವ ಮಹತ್ವದ ಮೆಟ್ಟಿಲು ಎಂದು ಜನ ಕಂಡು ಕೊಂಡಿತು.

ಮಾನವನು ನಿತ್ಯದ ಲೌಕಿಕ ಜೀವನದಿಂದ ಪಾರಮಾರ್ಥಿಕ ಜೀವನದತ್ತ ಮುನ್ನಡೆಯಲು ಸನಾತನವಾಗಿ ಆಚರಣೆಯಲ್ಲಿರುವ ಹಬ್ಬಗಳು ಸಾಧನವಾಗಿವೆ. ಮಹತ್ವದ ಜಯಂತ್ಯುತ್ಸವಗಳನ್ನು ಆಚರಿಸುವದು ಅವರು ಸಾಧಿಸಿದ ಮಹತ್ಕಾರ್ಯ, ಆದರ್ಶ ಜೀವನ ಪ್ರತಿಯೊಬ್ಬರ ಹೃದಯದಲ್ಲಿ ಬಿಂಬಿಸಲು ಕಾರಣವಾಗಿದೆ.

ಹಬ್ಬಗಳೆಂದರೆ ಕೇವಲ ಉಂಡು ಉಟ್ಟು ತೇಗಿ ನಲಿದಾಡುವದಲ್ಲ. ವ್ರತನಿಯಮಗಳನ್ನು ಎಲ್ಲ ದಿನಗಳಲ್ಲಿಯೂ ಆಚರಿಸಲು ಅಸಾಧ್ಯವಾಗಿರುವದರಿಂದ ನಿಯತ ದಿನಗಳಲ್ಲಾದರೂ ಕಡ್ಡಾಯವಾಗಿ, ದೇಹದಂಡನೆಯ ಮೂಲಕ ನಮಗೆ ನಾವೇ ಆತ್ಮಸಂಗಾತಿಗಳಾಗುವ ಕೆಲಸ ಮಾಡಬೇಕು. ಇದಕ್ಕಾಗಿ ಸ್ನಾನ, ವಂದನೆ, ಜಪ, ತಪ, ಪೂಜೆಗಳು ಇತ್ಯಾದಿ, ಕೇವಲ ಬಾಹ್ಯ ಶುದ್ಧಿಗಿಂತ ಅಂತಃಶುದ್ಧಿ ಮುಖ್ಯ.

ಧರ್ಮ ಸೂಕ್ಷ್ಮದ ತತ್ವದ ದೃಷ್ಟಿಯಿಂದಲೇ ಹಬ್ಬ ಹರಿದಿನಗಳನ್ನು ಕುರಿತು ವಿಚಾರಿಸಬೇಕು. ಹಬ್ಬಗಳಿಗೆ ಆಚಾರ ಮತ್ತು ವಿಚಾರ ಎಂಬ ಎರಡು ಮುಖಗಳುಂಟು, ಇವೆರಡೂ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಆಚಾರದಲ್ಲಿ ನಂಬಿಕೆಗೆ ಪ್ರಾಧಾನ್ಯತೆಯೂ, ವಿಚಾರದಲ್ಲಿ ಧರ್ಮ ಜಾಗ್ರತೆಯೂ ಮುಖ್ಯವಾದವು. ಒಟ್ಟಿಗೆ ವಿಚಾರಪೂರ್ವಕವಾದ ಆಚರಣೆ ಮುಖ್ಯ.

ಜೀವನಕ್ಕೆ ನೆಮ್ಮದಿ ಬೇಕಾದರೆ ಬಾಳಿನಲ್ಲಿ ನಂಬಿಕೆ ಇರಬೇಕು. ನೆಮ್ಮದಿ ಇಲ್ಲದ ಜೀವನ ಮರಳುಗಾಡು. ಜೀವನವು ಕೇವಲ ಯಾಂತ್ರಿಕ ರೀತಿಯದಲ್ಲ, ನಮ್ಮ ನಿತ್ಯದ ಆಚರಣೆ ಕರ್ತವ್ಯಗಳು ನಮ್ಮ ನಂಬಿಕೆಗಳನ್ನು ಅನುಸರಿಸಿವೆ.

ಹಬ್ಬಗಳನ್ನು ಆಚರಿಸುವದು ನಮ್ಮಲ್ಲಿ ವಿಶೇಷವಾಗಿ ಸಾಂಪ್ರದಾಯಕವಾಗಿ ಬಂದಿದೆ. ಭಾರತೀಯರು ಸಂಪ್ರದಾಯ ಶರಣರು. ನಮ್ಮಲ್ಲಿ ನಿಜವಾದ ಆಚರಣೆ ಹೋಗಿ ಕೇವಲ ಅಂಧಾನುಕರಣೆಯು ಶುಷ್ಕ ಆಚರಣೆ ಬಂದಿದೆ. ಉದಾಹರಣೆಗಾಗಿ ಒಬ್ಬ ಬ್ರಾಹ್ಮಣನು ತನ್ನ ಪಿತನ ಶ್ರಾದ್ಧವನ್ನು ಮಾಡುವ ದಿನ ಮನೆಯಲ್ಲಿ ಸಾಕಿದ ಬೆಕ್ಕನ್ನು ಬೀಸುವ ಕಲ್ಲಿಗೆ ಕಟ್ಟಿ ತನ್ನ ಕೆಲಸದಲ್ಲಿ ತೊಡಗುತ್ತಿದ್ದನು. ಕಾಲಕ್ರಮೇಣ ಈ ತಂದೆಯ ಶ್ರಾದ್ಧವನ್ನು ಮಗ ಮಾಡುವಾಗ ಏನೂ ಯೋಚಿಸದೆ ತನ್ನ ತಂದೆ ಹೇಗೆ ಮಾಡುತ್ತಿದ್ದನೋ ಅದೇ ರೀತಿ ಆಚರಣೆ ಮಾಡಬೇಕೆಂದು ಬೆಕ್ಕು ಮನೆಯಲ್ಲಿಲ್ಲದಿದ್ದರೂ ಪರರ ಮನೆಯಿಂದ ತಂದು ಬೀಸುವ ಕಲ್ಲಿಗೆ ಕಟ್ಟಿ ಶ್ರಾದ್ಧ ಮಾಡ ತೊಡಗಿದನು. ತಂದೆಯು ಮೈಲಿಗೆಯಾದೀತೆಂದು ಮಡಿದೋಷಕ್ಕೆ ಅಂಜಿ ಬೆಕ್ಕನ್ನು ಬೀಸುವ ಕಲ್ಲಿಗೆ ಕಟ್ಟುತ್ತಿದ್ದುದನ್ನು ತಿಳಿಯದ ಮಗನ ಪಾಲಿಗೆ ಅದು ಅಂಧ ಸಂಪ್ರದಾಯವಾಯಿತು.

ಭಾರತೀಯ ಹಬ್ಬಗಳು ಭಕ್ತಿ, ಜ್ಞಾನ, ಕರ್ಮಗಳ ತ್ರಿವೇಣಿ ಸಂಗಮವು. ದೇವರನ್ನು ಹಬ್ಬದ ದಿನ ವಿಶೇಷ ಭಕ್ತಿಯಿಂದ ಪೂಜಿಸುತ್ತೇವೆ. ದೇವರನ್ನು ಬೇಡುವದು ಕಾಡುವದು ಭಕ್ತಿಯಲ್ಲ. ನಿಷ್ಕಾಮ ಹೃದಯದ ನಿವೇದನೆಯೇ ಭಕ್ತಿ. ಅಂತರಂಗ ಬಹಿರಂಗ ಶುದ್ಧಿಯಿಂದ ದೇವರನ್ನು ಸ್ಮರಿಸುವದೇ ಸನ್ಮಾರ್ಗದ ದಾರಿ.

ಭಾರತೀಯ ಪಂಚಾಂಗವನ್ನು ನೋಡಿದರೆ ವರ್ಷದುದ್ದಕ್ಕೂ ಹಬ್ಬದ ಒಂದು ಸರಪಳಿಯೇ ಕಾಣುವದು. ಹಬ್ಬದಿಂದ ಸಾಮಾಜಿಕ ಜೀವನ ಮತ್ತು ಕಲೆಯನ್ನು ಪ್ರದರ್ಶಿಸುವ ಅವಕಾಶವು ಸಿಗುತ್ತದೆ. ದೇವರ ಪೂಜೆ, ಸಂಗೀತ, ನೃತ್ಯವನ್ನೊಳಗೊಂಡಿರುತ್ತದೆ. ಹಬ್ಬಗಳನ್ನು ಆಚರಿಸುವ ವಿಧಾನಗಳು ಹಲವು. ರಾಷ್ಟ್ರನಾಯಕರ ಹುಟ್ಟು ಹಬ್ಬದ ದಿನಾಚರಣೆ, ಕಾಲಋತುಗಳ ಬದಲಾವಣೆಯ ಸಮಯ, ದೇವತೆಗಳ ಪೂಜೆ, ತಮ್ಮ ಧರ್ಮಗಳಿಗನುಗುಣವಾಗ ಹಬ್ಬಗಳನ್ನು ಆಚರಿಸುತ್ತಾರೆ. ಭಾರತವು ಹಿಂದೂ, ಮುಸಲ್ಮಾನ, ಕ್ರಿಶ್ಚನ್, ಶೀಖ, ಜೈನ, ಪಾರ್ಸಿ ಮತ್ತು ಬೌದ್ಧಧರ್ಮಗಳನ್ನೊಳಗೊಂಡ ವಿಶಾಲ ದೇಶವಾಗಿದೆ.

ಉತ್ತರದ ಆರ್ಯರು ಪ್ರಕೃತಿದೇವಿಯನ್ನು ಆರಾಧಿಸುತ್ತಿದ್ದರು. ದಕ್ಷಿಣದ ದ್ರಾವಿಡರು ದೇವರ ಬಗೆಗೆ ನಂಬಿಗೆಯನ್ನಿಟ್ಟಿದ್ದರು. ಮುಂದೆ ಬರಬರುತ್ತ ಅನೇಕ ದೇವತೆಗಳನ್ನು ಪೂಜಿಸ ಹತ್ತಿದರು. ಬ್ರಹ್ಮನಿಂದ ಬಂದ ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣವೇದ ಇವು ಹಿಂದುಗಳ ಪವಿತ್ರವೇದಗಳಾದವು. ಭಾರತದ ಎರಡು ಮಹಾಗ್ರಂಥಗಳಾದ ರಾಮಾಯಣ ಮತ್ತು ಮಹಾಭಾರತಗಳು ನಮ್ಮ ಸಂಸ್ಕೃತಿಯ ಪ್ರತೀಕಗಳು. ಮಹಾಭಾರತದಲ್ಲಿಯ ಭಗವದ್ಗೀತೆಯಂತೂ ಹಿಂದುಗಳ ಜೀವನವನ್ನೆ ಬದಲಿಸುವಂತಹ ಪೂಜ್ಯಗ್ರಂಥ.

ಹಬ್ಬಗಳು ಮೂಲ ಆಧ್ಯಾತ್ಮದಲ್ಲಿ :

ಹಬ್ಬಗಳು ನಮ್ಮ ಆಧ್ಯಾತ್ಮಿಕ ಶ್ರದ್ಧೆಯನ್ನು ಬದಲಿಸುವ ಗುರುಗಳೆನ್ನಬಹುದು. ಶುದ್ಧ ಜೀವನವನ್ನು ನಡೆಸಲು ಇವು ದಿವ್ಯ ಸಾಧನಗಳಾಗಿವೆ. ಜೀವನದ ಗಡಿಬಿಡಿಯಲ್ಲಿ ಸ್ವಲ್ಪ ಸಮಯ ವಾದರೂ ಸಂಯಮದಿಂದ ದೇವಸಾನಿಧ್ಯದಲ್ಲಿ ದೈವಾಂಶ ಸಂಭೂತರ ಕಡೆಗೆ ಮನಸ್ಸನ್ನು ತಿರುಗಿಸಲು ಸಹಾಯಕಗಳಾಗಿರುವದರಿಂದ ಜಗತ್ತಿನ ಎಲ್ಲ ಜನರೂ ಒಂದಲ್ಲ ಒಂದು ಬಗೆಯ ಹಬ್ಬವನ್ನು ಆಚರಿಸುತ್ತಾರೆ. ಆದರೆ ಅದರ ಆದಿ ತಿಳಿಯದು. ಬಹುಶಃ ಭಾರತದಲ್ಲಿ ಇವುಗಳ ವೈವಿಧ್ಯತೆ ವಿಪುಲವಾಗಿ ಕಂಡು ಬರುತ್ತದೆ. ಯುಗಾದಿಯಿಂದ ಉಪಕ್ರಮಿಸಿದ ಹಬ್ಬಗಳ ಸಾಲು ಕಾಮನ ಹುಣ್ಣಿಮೆಯ ವರೆಗೆ ಒಂದು ಚಕ್ರ ಉರುಳುತ್ತದೆ. ಹಬ್ಬ ಕೇವಲ ಆಮೋದವಲ್ಲ; ದೇವ ಪೂಜೆ.

ಭಾರತೀಯ ಹಬ್ಬಗಳೊಂದೊಂದಕ್ಕೂ ಒಂದೊಂದು ಸತ್ ಸಂಪ್ರದಾಯವುಂಟು. ಉದಾಹರಣೆಗಾಗಿ 'ಅಳಿಯನ ಪೂಜೆ' ಹೇಗೆ ಪ್ರಾರಂಭವಾಯಿತು ಎಂಬುದನ್ನು ವಿಚಾರಿಸಬಹುದು. ನರಕಾಸುರನು ತನಗೆ ಸುಂದರವಾಗಿ ಕಂಡ ಹದಿನಾರು ಸಾವಿರ ತರುಣಿಯರನ್ನು ಬಂಧನದಲ್ಲಿಟ್ಟಿದ್ದ. ಕೃಷ್ಣ ಅವರನ್ನು ಸೆರೆಯಿಂದ ಬಿಡಿಸಿ ನರಕಾಸುರನನ್ನು ಸಂಹರಿಸಿ ಅವರೆಲ್ಲರನ್ನೂ ಉದ್ಧರಿಸಿದ. ಅಂತೆಯೇ ನರಕಾಸುರ ವಧೆಯು, ಕೃಷ್ಣಪೂಜೆಯು ಪುಣ್ಯಸ್ಮರಣೆಯು ಅಂದಿನಿಂದ ಪ್ರಾರಂಭವಾಯಿತು. ಇದರ ಸುಂದರ ರೂಪಕವಾಗಿ ಕನ್ಯಾಸೆರೆಯನ್ನು ಬಿಡಿಸಿದವನೆಂದು ದೀಪಾ

ವಳಿ ಹಬ್ಬದ ದಿನ 'ಅಳಿಯನ ಪೂಜೆ' ಜಾರಿಗೆ ಬಂದಿರಬೇಕು. ಶ್ರೀಕೃಷ್ಣನು ಈ ಎಲ್ಲ ಕನ್ಯೆಯರನ್ನು ಮದುವೆಯಾಗಿದ್ದರಿಂದ ಅವನಿಗೆ ಹದಿನಾರು ಸಾವಿರ ಹೆಂಡಂದಿರು ಅನ್ನುವ ರೂಢಿಯಿದೆ.

ಧ್ಯಾನ, ಪ್ರಾರ್ಥನೆಗಳಿಂದ ಭಕ್ತಿ ಹೆಚ್ಚಾಗುತ್ತದೆ. ಇದಕ್ಕೆ ಮನಸ್ಸಿನ ಸಂಯಮ, ತಲ್ಲೀನತೆ ಬಹು ಮುಖ್ಯವಾಗಿವೆ. ಧ್ಯಾನ ವಿಲ್ಲದೆ ಮನಸ್ಸು ಸ್ಥಿರವಾಗದು. ಸ್ಥಿರಮನಸ್ಸಿಲ್ಲದಿದ್ದರೆ ಅಧ್ಯಾತ್ಮಿಕ ಪ್ರಗತಿ ಸಾಧ್ಯವಿಲ್ಲ. ಸಾಧಕನು ಯಾವಾಗಲೂ ದೇವರಲ್ಲಿ ಶ್ರದ್ಧೆ ಯುಳ್ಳವನಿದ್ದಿರಬೇಕು. ನಮ್ಮ ನಂಬಿಕೆಗಳು, ಆಚಾರ-ವಿಚಾರಗಳು ಪರಿಶುದ್ಧವಾಗಿರಬೇಕು. ಪ್ರಾರ್ಥನೆಯು ಮನಸ್ಸನ್ನು ಪವಿತ್ರ ಗೊಳಿಸಿ ಹಿರಿದಾದ ಶಕ್ತಿಯನ್ನು ನೀಡುತ್ತದೆ. 'ಪೂಜೆ ತಾಂ ಶಕ್ತಿ ಯಲ್ತೆ' ಎಂದು ಕವಿ ಕುವೆಂಪು ಸಾರಿರುವದುಂಟು. ಹಿರಿದಾದ ಪ್ರಾರ್ಥನಾ ತಪಶ್ಶಕ್ತಿಯಿಂದ ಭಕ್ತನಿಗೆ ಮರಣವೇ ಮಹಾನವಮಿ ಯಾಗುವದು.

ಹಬ್ಬಗಳಲ್ಲಿ ಯುಗಾದಿ, ಶ್ರೀರಾಮನವಮಿ, ನಾಗರ ಪಂಚಮಿ, ಗಣೇಶ ಚತುರ್ಥಿ, ದಸರಾ, ದೀಪಾವಳಿ, ಸಂಕ್ರಾಂತಿ, ಶಿವರಾತ್ರಿ ಮತ್ತು ಕಾಮನಹಬ್ಬ ಇವಲ್ಲದೆ ಜಯಂತಿಗಳು ಮುಂತಾ ದವು ಮುಖ್ಯವಾದವುಗಳಾಗಿವೆ. ಭಾರತದ ಒಂದೊಂದು ಪ್ರಾಂತ ದಲ್ಲಿ ಒಂದೊಂದು ಹಬ್ಬಕ್ಕೆ ಪ್ರಾಮುಖ್ಯತೆಯುಂಟು. ಮೈಸೂರಿಗೆ ದಸರಾ, ತಮಿಳುನಾಡು, ಆಂಧ್ರಗಳಿಗೆ–ಸಂಕ್ರಾಂತಿ, ಹರೋಹರ ಗಳು, ಕೇರಳಕ್ಕೆ–ಓಣಂ, ಮಹಾರಾಷ್ಟ್ರಕ್ಕೆ–ಗಣೇಶ ಉತ್ಸವ, ಉತ್ತರ ಪ್ರದೇಶಕ್ಕೆ–ದೀಪಾವಳಿ ಮತ್ತು ಹೋಳಿ, ದೆಹಲಿಗೆ– ಕಾಮನ ಹಬ್ಬ, ಬಂಗಾಲಕ್ಕೆ-ದುರ್ಗಾಪೂಜೆ, ಕಾಶ್ಮೀರಕ್ಕೆ-ಶಿವರಾತ್ರಿ,

ಪಂಜಾಬಕ್ಕೆ–ಟಿಕ್ಕಾ, ಹಿಮಾಚಲ ಪ್ರದೇಶಕ್ಕೆ–ಮಿಂಜರ್‌ಮೇಳ್, ಆಸಾಮ–ರಾಸಲೀಲೆ, ಬಿಹಾರಕ್ಕೆ–ಗುರುಪೂರಬ್. ರಾಜಸ್ಥಾನಕ್ಕೆ–ಗಂಗವರ (Gangawar) ಮುಖ್ಯವಾಗಿದ್ದು ಇಲ್ಲಿ ಇವುಗಳನ್ನು ವೈಭವದಿಂದ ಆಚರಿಸುತ್ತಾರೆ.

ಹಬ್ಬಹುಣ್ಣಿಮೆಗಳನ್ನು ಆಚರಿಸುವದು ಬರಿ ಖರ್ಚಿನದಾರಿಯೆಂದು ತಳ್ಳಿಹಾಕುವದು ಯುಕ್ತವಲ್ಲ. ದುಡಿಯುವದೊಂದೆ ಮನುಷ್ಯನ ಗುರಿಯಲ್ಲ.

ನಿತ್ಯದ ನೀರಸ ಜೀವನಕ್ಕೆ ಹಬ್ಬದಿಂದ ಹೊಸ ಕಳೆ ಬರುತ್ತದೆ. ಹಬ್ಬಕ್ಕೆ ಸಂತೋಷವೆಂದು ಇನ್ನೊಂದು ಹೆಸರನ್ನು ನೀಡಬಹುದು. ಆ ಒಂದು ದಿನವಾದರೂ ಸಂಸಾರದ ಅಡ್ಡಿ ಆತಂಕಗಳನ್ನು ಮರೆತು ನೆಂಟರಿಷ್ಟರೊಡನೆ ಸರಸವಾಗಿ ಕಾಲಕಳೆಯುತ್ತೇವೆ. ಆದರೆ, ಶಕ್ತಿ ಮೀರಿದ ಶ್ರಮ, ಶಕ್ತಿ ಮೀರಿದ ವೆಚ್ಚ, ಪುರುಸತ್ತಿಲ್ಲದ ಓಡಾಟ ಆದದ್ದಾದರೆ ಉತ್ಸವದ ದಿನವಾದರೂ ಆನಂದದ ದಿನವಾಗಲಾರದು. ಹಬ್ಬಗಳಲ್ಲಿ ಹೆಣ್ಣುಮಕ್ಕಳ ಪಾತ್ರ ಹಿರಿದು.

ಕವಿ ಬೇಂದ್ರೆಯವರು ಹೇಳಿದಂತೆ —

ಮನೆಯ ಹೊಸ್ತಿಲಕೆ ಶುಭ ಬರಿಯುವಾಕೆ
ಮಂಗಲವ ಬಾರೆಂದು ಕರೆಯುವಾಕೆ

ಈ ರೀತಿ ಗೃಹಿಣಿಯೇ ಗೃಹವಾಗಿ ಮನೆಯನ್ನು ಮಕ್ಕಳನ್ನು ಶೃಂಗರಿಸಿ ದೇವರನ್ನು ಭಕ್ತಿಯಿಂದ ಪೂಜಿಸಿ ಎಲ್ಲರನ್ನೂ ಸಂತೋಷಗೊಳಿಸುವ ಕಾರ್ಯ ಅವಳದಾಗಿದೆ.

ಒಟ್ಟಾರೆ ನಮ್ಮಲ್ಲಿ ಹಬ್ಬಗಳಿಗೆ ಸಾಮಾಜಿಕ ಮತ್ತು ಸಾರ್ವಜನಿಕ ಸ್ವರೂಪ ಬಂದು ಅವು ಸಂಸ್ಕೃತಿಯ ಹೆಗ್ಗುರುತಾಗಿ ಜನಾಂಗದ ಜೀವಾಳವಾಗಿ ಪ್ರತಿಯೊಬ್ಬರಿಗೂ ಅಪೂರ್ವವೆನಿಸಿವೆ.

ಹಬ್ಬಗಳು

ಯುಗಾದಿ :

ಋತುಗಳಲ್ಲಿ ವಸಂತವಿದ್ದಂತೆ ಹಬ್ಬಗಳಲ್ಲಿ ಯುಗಾದಿ
ಯುಗ ಹೊಸವರ್ಷ. ಯುಗಾದಿಯೆಂದರೆ ವರ್ಷದ ಆದಿ ಎಂದ
ಹೇಳಬಹುದಷ್ಟೆ. ಶಾಲಿವಾಹನ ಶಕದ ಚೈತ್ರ ಶುದ್ಧ ಪ್ರತಿಪದೆಯು
ಕೃತಯುಗ, ತ್ರೇತಾಯುಗ ಮತ್ತು ಕಲಿಯುಗದ ಆರಂಭವಂತ
ಅಲ್ಲ. ಉತ್ತರಾಯಣ, ದಕ್ಷಿಣಾಯನ ಎಂಬ ಎರಡು ಅಯ
ಗಳನ್ನು ಹೊಂದಿರುವ ವರ್ಷದ ಆದಿಗೆ ಯುಗಾದಿಯೆಂಬ ಅರ್ಥ
ಸೂಕ್ತವಾದದು. ಭಾಸ್ಕರಾಚಾರ್ಯ ಎಂಬ ಸುಪ್ರಸಿದ್ಧ ಜ್ಯೋತಿ
"ಯುಗಾದಿಕಾನಾಯು ಯುಗ ಪತ್ರವೃತ್ತಿಃ" ಎಂದಿದ್ದಾನ
ಅಂದರೆ, ಸೂರ್ಯ ಚೈತ್ರ ಶುದ್ಧ ಪಾಡ್ಯಮಿಯ ದಿನ ಭೂಮಧ್ಯ
ರೇಖೆಯ ಮೇಲೆ ಇರುವದರಿಂದ ಆದಿ ನವೇ 'ಯುಗಾದಿ'ಎಂದರ್ಥ
ಹಿಂದೂ ಜ್ಯೋತಿಷ್ಯ ಶಾಸ್ತ್ರ, ಧರ್ಮಶಾಸ್ತ್ರ, ಋತುಧರ್ಮಗಳನ
ಅನುಸರಿಸಿ ಚೈತ್ರಶುದ್ಧ ಪಾಡ್ಯಮಿಯನ್ನು ದಕ್ಷಿಣದೇಶದ ಕನ್ನ

ಗರು, ಆಂಧ್ರರು ಹೊಸ ವರ್ಷದಾದಿಯ ಹಬ್ಬವಾಗಿ ಆಚರಿಸು ವರು.

ವರ್ಷದ ಮೂರೂವರೆ ಶುಭದಿನಗಳಾದ ಯುಗಾದಿ, ವಿಜಯದಶಮಿ, ಬಲಿಪಾಡ್ಯಮಿ ಮತ್ತು ಅಕ್ಷಯತದಿಗೆ ಈ ದಿನ ಗಳಲ್ಲಿ ಎಂತಹ ಮಂಗಲ ಕಾರ್ಯಗಳನ್ನೂ ಮಾಡಬಹುದು. ಈ ದಿನದ ಆನಂದ ಸೌಖ್ಯಗಳು ಬಾಳಿನಲ್ಲಿ ಬೆಂಬತ್ತಿ ಬರುತ್ತವೆ ಎಂಬುದು ಜನರ ನಂಬಿಕೆ. ರೈತರು, ವ್ಯಾಪಾರಸ್ಥರು ಮತ್ತು ಇನ್ನುಳಿದವರು ಅಂದಿನ ದಿನವೇ ಶುಭಕಾರ್ಯಗಳನ್ನು ಆಚರಿಸುವದುಂಟು. ಯುಗಾದಿ ಬಂದಿತೆಂದರೆ ಎಲ್ಲೆಲ್ಲಿಯೂ ಸಂತೋಷ ಸಡಗರಗಳು ತಲೆದೋರುತ್ತವೆ.

ವೈಶಿಷ್ಟ್ಯ : ಬ್ರಹ್ಮದೇವನು ಸೃಷ್ಟಿ ಮಾಡಿದ ದಿನ. ಅಯೋಧ್ಯಾ ಪಟ್ಟಣದಲ್ಲಿ ಶ್ರೀರಾಮಚಂದ್ರನು ಪಟ್ಟಾಭಿಷಿಕ್ತವಾದ ದಿನ. ಶಾಲಿವಾಹನ ಶಕ ಪ್ರಾರಂಭವಾದ ದಿನ. ಎಲ್ಲವೂ ಚೈತ್ರ ಶುದ್ಧ ಪ್ರತಿಪದೆ ಇರುವದರಿಂದ ಇದಕ್ಕೆ ಹೆಚ್ಚು ಮಹತ್ವ ಬಂದಿದೆ.

ಗುಡಿಹಬ್ಬ : ಮಹಾಭಾರತದಲ್ಲಿ ಬರುವ ಚೇದಿ ರಾಜ್ಯದ ಅರಸು ವಸುವಿನ ಉಗ್ರತಪಸ್ಸಿಗೆ, ಇಂದ್ರನು ತನ್ನ ಪದವಿಗೆ ಚ್ಯುತಿ ಬರುವದೆಂಬ ಭಯದಿಂದ ಆತನ ತಪೋಭಂಗ ಮಾಡಲೆತ್ನಿಸಿ ವೈಜಂತಿ ಮಾಲೆಯನ್ನು ವಸುವಿಗೆ ಕೊಟ್ಟು. ಚಿನ್ನದ ಕಲಶವುಳ್ಳ ಚಕ್ರಾಧಿಪತ್ಯದ ಧ್ವಜವನ್ನು ರಾಜನ ತಲೆಯ ಮೇಲೆ ಇಡುತ್ತಾನೆ. ಇದು ನಡೆದದ್ದು ಚೈತ್ರ ಶುದ್ಧ ಪ್ರತಿಪದೆಯ ದಿನ. ಇದರ ಸವಿ ನೆನಪೆಂಬಂತೆ ಗುಜರಾಥ, ಮಹಾರಾಷ್ಟ್ರ ಮತ್ತು ಕನ್ನಡನಾಡಿನ

ಕೊಂಕಣಿ ಬ್ರಾಹ್ಮಣರು ಆ ದಿನದಂದು ಎತ್ತರವಾದ ಒಂದ
ಗಳುವಿನ ತುದಿಯಲ್ಲಿ ರೇಶಿಮೆಯ ಬಟ್ಟೆಯನ್ನು ಹೊದಿಸಿ ಬೆ
ಇಲ್ಲವೆ ಹಿತ್ತಾಳೆಯ ಗಿಂಡಿಗಳನ್ನು ಅದರ ಮೇಲೆ ಹಾಕಿ ಬೇವಿ
ಸೊಪ್ಪನ್ನು ಅದಕ್ಕೆ ಕಟ್ಟಿ, ಮನೆಯ ಮುಂದೆ ಧ್ವಜವನ್ನು ನಿಲ್ಲಿಸ
ತ್ತಾರೆ. ಈ ಹಬ್ಬಕ್ಕೆ 'ಗುಡಿ ಪಾಡ್ಯಮಿ' ಎಂದು ಕರೆಯುವರು
ಹಬ್ಬದ ದಿನದಂದು ಬೇವನ್ನು ಹಾಕಿದ ನೀರಿನಿಂದ ಸ್ನಾನ ಮಾಡ
ವರು. ಬೇವಿನ ಸೊಪ್ಪಿನಿಂದ ಕೂಡಿದ ನೀರು ಚರ್ಮರೋ
ನಿವಾರಿಸುವುದಲ್ಲದೆ ಮೈಯಲ್ಲಿಯ ಹೆಚ್ಚಿನ ಉಷ್ಣತೆ ಕಳೆಯುತ್ತದ
ಬೇವು-ಬೆಲ್ಲಗಳ ಸೇವನೆ ಸುಖದುಃಖಗಳನ್ನು ಸಮನಾಗಿ ಅನುಭ
ಸುತ್ತೇನೆ ಎಂಬ ಸಂಕಲ್ಪದ ಸಂಕೇತ. ಅಂದು ಪಂಚಾಂಗ ಶ್ರವ
ಮಾಡುವರು. ದೇವಸ್ಥಾನಗಳಲ್ಲಿ ವಿಶೇಷ ಪೂಜೆ ಉತ್ಸವಗಳ
ನಡೆಯುವವು. 'ಯುಗ ಯುಗಾದಿ ಕಳೆದರೂ ಯುಗಾದಿ ಮರ
ಬರುತಿದೆ. ಹೊಸ ವರುಷಕೆ ಹೊಸ ಹರುಷವ ಹೊಸತು ಹೊಸತ
ತರುತಿದೆ' ಎಂಬ ಬೇಂದ್ರೆಯವರ ಕವಿವಾಣಿಯಂತೆ ಯುಗಾ
ಯೊಂದು ನಾಡಿಗೆ ಉಜ್ವಲತೆಯನ್ನು ಜನತೆಗೆ ಸುಖಶಾಂತಿಗಳನ
ಹೊತ್ತು ತರಲಿ ಎಂದು ಆಶಿಸೋಣವೇ?

ಕಾರಹುಣ್ಣಿಮೆ ಮತ್ತು ಮಣ್ಣೆತ್ತಿನ ಅಮಾವಾಸ್ಯೆ :

ಇದು ಒಕ್ಕಲಿಗರ ಹಬ್ಬ. 'ಕಾರ್' ಎಂದರೆ ಮಳೆ. ಇಲ್ಲಿ
ದಲೆ ಮುಂಗಾರು ಮಳೆ ಆರಂಭ. ಕೃಷಿಗೆ ಆಧಾರವಾದ ಎತ
ಗಳಿಗೆ ಇದೀಗ ಹೆಚ್ಚಿನ ಗೌರವ. ಆದುದರಿಂದ ಜ್ಯೇಷ್ಠ ಮಾಸ

ಪೂರ್ಣಿಮೆ, ವೃಷಭ ಪೂಜೆಗೆ ಮೀಸಲಾಯಿತು. ಕನ್ನಡಿಗರಿಗೆ ಇದು ಕಾರಹುಣ್ಣಿಮೆ ಎನ್ನಿಸಿತು. ಹುಣ್ಣಿಮೆಯ ಮರುದಿವಸ ಎತ್ತುಗಳನ್ನು ಸಿಂಗರಿಸಿ ಮೆರವಣಿಗೆ ಮಾಡುವರು. ಊರಿನ ಅಗಸಿಗೆ ಕರಿ ಹರಿಯುವರು. ಕರಿಹರಿವ ನಂದಿಯ ಕರಿ ಬಿಳಿ ಬಣ್ಣ ನೋಡಿ ಆ ವರ್ಷದ ಬೆಳೆಯ ಫಲ ಕಟ್ಟುವರು. ಮಲೆನಾಡುಗಳಲ್ಲಿ ದೀಪಾವಳಿಯಲ್ಲಿ ಕರಿ ಹರಿಯುವರು.

ಹಿನ್ನೆಲೆ : ನಂದೀಶ್ವರನು ಲೋಕಕಂಟಕನಾದ ಕಾರಾಸುರನನ್ನು ಕೊಂದು ಶಾಂತಿಸ್ಥಾಪಿಸಿದ್ದರ ಸಂಕೇತವಾಗಿ ಕಾರಹುಣ್ಣಿಮೆ ಆಚರಿಸುವರೆಂಬ ಪೌರಾಣಿಕ ಹಿನ್ನೆಲೆಯಿದೆ. ಕಾರಾಸುರನ ಹಾವಳಿ ಲೋಕದಲ್ಲಿ ನಡೆದು ಅವನಿಗೆ ಭಯಭೀತರಾಗಿ ಶಿವನನ್ನು ಮೊರೆಹೋಗಲು, ಹರನು ಎಲ್ಲ ದೇವತೆಗಳ ಸಭೆ ಕರೆದು ಕಾರಾಸುರನನ್ನು ಸಂಹರಿಸಲು ಯಾರು ಸಿದ್ಧರಿದ್ದೀರಿ ಎಂದು ಕೇಳುತ್ತಾನೆ. ಯಾರೂ ಒಪ್ಪದಾಗ ಶಿವನು ಒಂದು ಕೊಪ್ಪರಿಗೆ ಹುಗ್ಗಿ ಮಾಡಿ ಅದರಲ್ಲಿ ಒಂದು ಹೊನ್ನುಂಗುರ ಹಾಕಿ ಎಲ್ಲ ದೇವತೆಗಳನ್ನು ಕೂಡಿಸಿ ಊಟಕ್ಕೆ ಬಡಿಸಿ ಇದು ಯಾರಿಗೆ ಬರುವದೋ ಅವರು ಆತನನ್ನು ಕೊಲ್ಲಬೇಕು ಎಂದಾಗ ಅದು ನಂದೀಶ್ವರನಿಗೆ ಬರುತ್ತದೆ. ಆಗ ನಂದೀಶ್ವರನು ಈಶ್ವರನ ಹೆಸರಿನಿಂದ ಕಾರಾಸುರನನ್ನು ಸಂಹರಿಸುವನು. ಆ ಸಂತಸದ ಪ್ರತೀಕವಾಗಿ ಕರಿಯ ಮೊದಲ ದಿನ ಹೊನ್ನುಗ್ಗಿ ಆಚರಿಸುವರು.

ಮಣ್ಣೆತ್ತಿನ ಅಮಾವಾಸ್ಯೆ : ಕಾರಹುಣ್ಣಿಮೆಯಂದು ಜೀವಂತ ಎತ್ತಿನ ಪೂಜೆಯಾದರೆ, ಇಂದು ಮಣ್ಣಿನಿಂದ ತಯಾರಿಸಿದ ವೃಷಭನ ಪೂಜೆಯಾಗುತ್ತದೆ. ಇದು ಕೃಷೀ ಜೀವನದ ಹಬ್ಬ. ಇದಕ್ಕೆ

ಬಸವನ ಅಮಾವಾಸ್ಯೆಯೆಂಬ ಇನ್ನೊಂದು ಹೆಸರೂ ಇದೆ. ಇಂತು ಜ್ಯೇಷ್ಠದ ಎರಡೂ ಹಬ್ಬಗಳೂ ಕೃಷಿಜೀವನದ ಪ್ರಾಧಾನ್ಯ ಸೂಚಕವಾದವು. ಕನ್ನಡನಾಡಿನ ಪ್ರಮುಖ ಹಬ್ಬಗಳಲ್ಲಿ ಇದೂ ಒಂದು. ಜ್ಯೇಷ್ಠ ಪೌರ್ಣಿಮೆಯ ದಿನ ಕನ್ನಿಕೆಯರು ವಟಸಾವಿತ್ರಿ ವ್ರತವನ್ನು ಆಚರಿಸುವರು. ಅಲ್ಪ ಆಯುಷ್ಯವುಳ್ಳ ಗಂಡನನ್ನು ಬದುಕಿಸಿ, ಮಾವನ ಕಣ್ಣನ್ನು ಮರಳಿ ತರಿಸಿ, ಕಳೆದು ಹೋದ ರಾಜ್ಯ ಮರಳಿ ಪಡೆದ ಸಾಧ್ವಿ ಪತಿವ್ರತಾ ಶಿರೋಮಣಿ ಸಾವಿತ್ರಿಯ ವ್ರತವನ್ನು ಜ್ಯೇಷ್ಠ ಶುದ್ಧ ದಿನದಂದು ಆಚರಿಸುವದರಿಂದ 'ವಟಪೌರ್ಣಿಮಾ' ಅಥವಾ 'ಜ್ಯೇಷ್ಠ ಅಮಾವಾಸ್ಯೆ' ಎಂದು ಕರೆಯುವರು.

ನಾಗರ ಪಂಚಮಿ :

ಶ್ರಾವಣ ಶುಕ್ಲ ಪಂಚಮಿಗೆ 'ನಾಗ ಪಂಚಮಿ' ಎಂದು ಕರೆಯುವರು. ನಾಗಪೂಜೆಯೇ ನಾಗರ ಪಂಚಮಿಯ ವೈಶಿಷ್ಟ್ಯ. ದ್ರಾವಿಡರು ನಾಗಪ್ಪನನ್ನು ಅಗ್ರ ದೇವನನ್ನಾಗಿ ಸ್ವೀಕರಿಸಿದ್ದರು. ಕೆಲವೆಡೆ ಅಂಗಳದಲ್ಲಿ ನಾಗಮೂರ್ತಿ ಬರೆಯುತ್ತಾರೆ. ಮಹಾರಾಷ್ಟ್ರ ಮೈಸೂರು ಪ್ರಾಂತಗಳಲ್ಲಿ ಮಣ್ಣಿನ ಮೂರ್ತಿ ಮಾಡಿ ಹಾಲು ಹೊಯ್ಯುವರು. ಇದು ಹೆಣ್ಣುಮಕ್ಕಳ ಹಬ್ಬ.

ಶಿವನಿಗೆ ಆಭರಣವಾಗಿ, ವಿಷ್ಣುವಿಗೆ ಹಾಸಿಗೆಯಾಗಿ, ವಿಘ್ನೇಶ್ವರನ ಒಡಲಿಗೆ ಕಟ್ಟಾಗಿ, ಒಕ್ಕಲಿಗನ ಆಪ್ತ ಮಿತ್ರನಾಗಿ ಸೇವೆ ಸಲ್ಲಿಸುತ್ತಿರುವ ನಾಗನ ನಿಷ್ಠೆ ಅನುಪಮ.

ಮಹಾಭಾರತದಲ್ಲಿ ನಾಗರ ಉಲ್ಲೇಖ ಹೀಗೆ ಬಂದಿದೆ:— ನಾಗರಿಗೂ ಆರ್ಯರಿಗೂ ವೈರತ್ವ ಬೆಳೆದು ನಾಗರಾಜ ತಕ್ಷಕ ಪರೀಕ್ಷಿತನನ್ನು ಕಚ್ಚಿ ಕೊಲ್ಲಲಾಗಿ ಆತನ ಮಗ ಜನಮೇಜಯನು ಸರ್ಪಯಾಗ ಮಾಡಿ ನಾಗವಂಶ ಹಾಳು ಮಾಡಲು ಮುಂದಾಗುತ್ತಾನೆ. ಈ ದುರಂತ ನಿವಾರಣೆಗಾಗಿ ಆಸ್ತಿಕ ಋಷಿಯು ಮಧ್ಯಸ್ತಿಕೆ ವಹಿಸುತ್ತಾನೆ. ಅವನ ಮಧ್ಯಸ್ತಿಕೆಯಿಂದ ನಾಗರಾಜನು ಒಡಂಬಟ್ಟು ರಾಜನಲ್ಲಿದ್ದ ಎಲ್ಲ ವಿಷಹೀರಿ ಬದುಕಿಸುತ್ತಾನೆ. ಮುಂದೆ ಆರ್ಯರು ನಾಗನಿಗೆ ಮನ್ನಣೆ ಕೊಡಹತ್ತಿದರು. ಈ ಮನ್ನಣೆಯೇ ನಾಗಪೂಜೆಯಾಗಿದೆ. ಈಗಲೂ ಹಳ್ಳಿಗಳಲ್ಲಿ 'ಆಸ್ತಿಕ ಕಾಳಭೈರವ' ಎಂದು ಮನೆಯಲ್ಲಿ ಬರೆಯುವದು ಆ ಋಷಿಯ ಸಂಕೇತವಾಗಿದೆ. ಹಾವು ಹೊಲದಲ್ಲಿ ಇಲಿ ತಿಂದು ಬೆಳೆ ರಕ್ಷಿಸುವದರಿಂದ ಇದಕ್ಕೆ 'ಕ್ಷೇತ್ರಪಾಲಕ' ಎಂದು ಹೆಸರು. ಒಕ್ಕಲಿಗರು ನಾಗಪ್ಪನನ್ನು ವಿಶೇಷವಾಗಿ ಭಯಭಕ್ತಿಯಿಂದ ಕಾಣುತ್ತಾರೆ. ನಾಗರಪಂಚಮಿಯ ಸುತ್ತಲೂ ಹಲವಾರು ದಂತಕತೆಗಳು ಹುಟ್ಟಿಕೊಂಡಿವೆ. ದಕ್ಷಿಣ ಭಾರತದಲ್ಲಿ ನಾಗನಮೂರ್ತಿಗಳು ಪ್ರತಿಯೊಂದು ಊರಿನಲ್ಲಿ ಕಾಣಸಿಗುತ್ತವೆ. ಇದು ಆತನ ಬಗೆಗಿದ್ದ ನಿಷ್ಠೆಯನ್ನು ತೋರಿಸುತ್ತದೆ. ಪೈಸೆ ಇದ್ದರೆ ಪಂಚಮಿ – ನಾಗಪೂಜೆಯು ಬಂಜೆಯರಿಗೆ ಮಕ್ಕಳನ್ನು ಸಹ ನೀಡುತ್ತದೆ ಎನ್ನುವದು ಒಂದು ನಂಬಿಕೆ. ಅಂದು ಹೆಣ್ಣುಮಕ್ಕಳು ಗಂಡನ ಮನೆಯಿಂದ ತೌರುಮನೆಗೆ ಹೋಗುತ್ತಾರೆ. ನಮ್ಮ ಜಾನಪದ ಗೀತೆಗಳಲ್ಲಿ ಒಂದು ಪದ್ಯ ಹೀಗಿದೆ-

ನಾಗಪ್ಪಗ್ಹಾಲ ಹೊಯ್ಯೋಣ
ನಾಗರ ಹೆಡಿಯ್ಹಾಂಗ ಆಡೋಣ

ನಾಗರ ಪಂಚಮಿ ನಾಡಹೆಣ್ಣಿಗೆ ಹಬ್ಬ
ನಾಗಪ್ಪಗ್ಹಾಲ ಎರಿಯೋಣ ನನಗೆಣತಿ
ನಾಗರ ಹೆಡಿಯ್ಹಾಂಗ ಆಡೋಣ.

ಎಂದು ನಕ್ಕು ನಲಿದಾಡಿ ತಮ್ಮ ಎಲ್ಲ ನೋವುಗಳನ್ನು ಮರೆತು ಅಂದು ಹೆಂಗಳೆಯರು ಹುರುಪಿನಿಂದ ಇದ್ದು ಮತ್ತೆ ಮುಂದಿನ ನಾಗರ ಪಂಚಮಿಗೆ ಕೂಡೋಣ ಎಂದು ಹಾರೈಸುವರು.

ನಾಗಪ್ಪನು ಒಕ್ಕಲಿಗನ ಇಷ್ಟಮಿತ್ರ. ಆತನ ಹೊಲದಲ್ಲಿಯ ಹುಳಗಳನ್ನು ತಿಂದು ಬೆಳೆ ರಕ್ಷಣೆ ಮಾಡುವದರಿಂದ ಪ್ರತಿಯಾಗಿ ಕೃತಜ್ಞತೆಯನ್ನು ಸಲ್ಲಿಸಲು ಪ್ರೇಮಪೂರಿತವಾಗಿ ಹಾಲನ್ನು ಎರೆಯುತ್ತಾರೆ. ಇದು ನಮ್ಮ ಸಂಸ್ಕೃತಿಯ ವಿಶ್ವವ್ಯಾಪಕವಾದ ದೃಷ್ಟಿಕೋನವನ್ನು ತೋರಿಸುತ್ತದೆ. ನಮ್ಮ ಕೌಟುಂಬಿಕ ಜೀವನದಲ್ಲಿ ಸದಾಚಾರ, ಶುಚಿತ್ವ, ಪಾತಿವ್ರತ್ಯ ಮತ್ತು ತ್ಯಾಗ ಮೊದಲಾದ ಉತ್ತಮ ಗುಣಗಳನ್ನು ಕಲಿಸಿ ಬಾಳಿಗೊಂದು ಬೆಳಕನ್ನು ನೀಡುತ್ತದೆ.

ಗಣೇಶ ಚತುರ್ಥಿ :

ಭಾದ್ರಪದ ಮಾಸದಲ್ಲಿ ಬರುವ ಈ ಹಬ್ಬ ಭಾರತೀಯರೆಲ್ಲರೂ ಆಚರಿಸುವ ಹಬ್ಬವಾಗಿದೆ. ಸರ್ವಕಾರ್ಯದಲ್ಲಿಯೂ ಅಗ್ರಪೂಜೆ ಶ್ರೀಗಣೇಶನಿಗೆ ಸಲ್ಲುತ್ತದೆ. ಗಣಪತಿಯ ಪೂಜೆಯೆಂದರೆ ಸಾಮೂಹಿಕ ಜೀವನಕ್ಕೆ ತನ್ನ ಭಾವನೆಗಳನ್ನು ಅರ್ಪಣೆಮಾಡುವದು.

ಭಾರತೀಯರ ಹೃದಯದಲ್ಲಿ ಸಾವಿರಾರು ವರ್ಷಗಳಿಂದ ಚಿರಸ್ಥಾಯಿಯಾಗಿ, ಅಗ್ರಪೂಜೆಹೊಂದಿದವನಾಗಿ, ರುದ್ರಭಯಂಕರನಾಗಿ, ಸರಳಸ್ವಭಾವದವನಾಗಿ, ಹೊಟ್ಟೆಬಾಕನಾಗಿ, ಮಹಾಸೇನಾನಿಯಾಗಿ ಪ್ರಜಾಪ್ರಭುತ್ವದ ಹಿರಿಯ ಸಂಕೇತವುಳ್ಳವನಾಗಿ, ನಾಟ್ಯಾಚಾರ್ಯನಾಗಿ, ಸಿದ್ಧಿಗಳನ್ನು ವಶಪಡಿಸಿಕೊಂಡವನಾಗಿ, ವಿಘ್ನನಿವಾರಕನಾಗಿ, ಗಣನಾಯಕನಾಗಿ ಶ್ರೀಗಣೇಶನು ಭಕ್ತರಿಗೆ ನಾನಾ ರೂಪದಲ್ಲಿ ಕಾಣಿಸಿಕೊಂಡಿದ್ದಾನೆ.

ಯಸ್ಮಾದೋಂಕಾರ ಸಂಭೂತಿರ್ಯತೋ
ವೇದಾಯತೋ ಜಗತ್
ಯೇವ ಸರ್ವಮಿದಂ ವ್ಯಾಪ್ತಂ ತಂ
ವಿದ್ಧಿ ಗಣನಾಯಕಮ್

(ಯಾವನಿಂದ ಓಂಕಾರ ಸಂಭವಿಸಿತೋ, ಯಾರಿಂದ ವೇದಗಳು ಜನಿಸಿದವೋ, ಯಾರಿಂದ ಆ ಜಗತ್ತು ವ್ಯಾಪಿಸಿದೆಯೋ, ಅವನನ್ನು ಗಣಗಳ ನಾಯಕನೆಂದು ತಿಳಿ.)

ನಾರದ ಮಹರ್ಷಿಗಳ ಹೇಳಿಕೆಯಂತೆ—ಇಂದುಮತಿ ರಾಣಿ ತಪ್ಪಿಸಿಕೊಂಡು ಹೊರಟು ಹೋಗಿದ್ದ ಅವಳ ಪತಿ ಪುನಃ ರಾಜಧಾನಿಗೆ ಮರಳಿದ್ದು; ಚಿಂತಾಮಣಿ ಕ್ಷೇತ್ರದ ರಾಜ ರುಕ್ಮಾಂಗದನ ಕುಷ್ಠರೋಗ ವಾಸಿಯಾದದ್ದು; ನಳ ಮಹಾರಾಜನು ಕಳೆದುಕೊಂಡ ರಾಜ್ಯ ಮರಳಿ ಪಡೆದದ್ದು; ರಾಕ್ಷಸರ ಕೈಗೆ ಸಿಕ್ಕಿದ ಪ್ರದ್ಯುಮ್ನನನ್ನು ರುಕ್ಮಿಣಿಯು ದೇವಾನುಗ್ರಹದಿಂದ ಪುನಃ ಪಡೆದದ್ದು ವಿಘ್ನೇಶ್ವರನಿಗೆ ಮಹತ್ವ ಬಂದಿದೆ.

ಪೌರಾಣಿಕ ಹಿನ್ನೆಲೆ : ಅಗಜಾತೆಯು ತನ್ನ ಬೆವರಿನಿಂದ ರೂಪುಮಾಡಿ ಜೀವಕಳೆ ತುಂಬಿದುದೂ, ಇಂದುಧರ ಮತ್ತು ಗಿರಿಜೆಯರು ಅಡವಿಯಲ್ಲಿಯ ರತಿಕ್ರೀಡೆಯಾಡುತ್ತಿರುವ ಗಜಗಳನ್ನು ನೋಡಿ ತಾವೂ ಅದರಂತೆ ಆನಂದಹೊಂದಿ ಗಣಪತಿಗೆ ಜನ್ಮವಿತ್ತರೆಂಬ ಕಥೆಯುಂಟು. ಸಿಂಧುದಾನವನ ಸಂಹಾರಕ್ಕಾಗಿ ಪಾರ್ವತಿಯ ಉದರದಲ್ಲಿ ಚತುರ್ಥಿಯಂದು ಜನಿಸಿದನೆಂಬ ಕಥೆಯುಂಟು.

ವೈಶಿಷ್ಟ್ಯಪೂರ್ಣ ವ್ಯಕ್ತಿತ್ವ : ಈತನ ತಲೆ ಜಾಣತನದ ಸಂಕೇತ, ಹೊಟ್ಟೆ ವಿಶಾಲತೆಯನ್ನೂ, ಇಲಿ ಚಂಚಲತೆಯನ್ನೂ, ಹಾವು ನುಣುಚುವ ಸ್ವಭಾವವನ್ನೂ ಸೂಚಿಸುತ್ತದೆ. ಬ್ರಹ್ಮಚಾರಿ-ಮನೋಭಾವ ಭಕ್ತಿ, ಜ್ಞಾನ, ವೈರಾಗ್ಯಗಳ ಸಂಕೇತ. ಈತನು ವಿದ್ಯಾದೇವತೆಯಾಗಿ ಸಕಲರಿಂದಲೂ ವಂದ್ಯನಾದ ಲಂಬೋದರ ಎನಿಸಿದ್ದಾನೆ.

ಷೋಡಶಾವಸ್ಥ ಮೂರ್ತಿ : ಬಾಲ, ತರುಣ, ಭಕ್ತ, ವೀರ, ಶಕ್ತಿ, ಧ್ವಜ, ಸಿದ್ಧಿ, ಉಚ್ಛಿಷ್ಟ, ವಿಘ್ನರಾಜ, ಕ್ಷಿಪ್ರ, ಹೇರಂಬ, ಲಕ್ಷ್ಮಿ, ಮಹತ್ತು, ವಿಜಯ, ನೃತ್ಯ, ಊರ್ಧ್ವ ಹೀಗೆ ವಿಘ್ನೇಶ್ವರನು ಹದಿನಾರು ಅವಸ್ಥೆಗಳನ್ನು ಹೊಂದಿದವನಾಗಿದ್ದಾನೆ. ಈತ ಭಾರತದಲ್ಲಿ ಈ ರೀತಿ ಅವಸ್ಥೆಗಳನ್ನು ಹೊಂದಿದವನಾಗಿದ್ದರೆ ವಿದೇಶಗಳಲ್ಲಿ ಈತನ ವಿಗ್ರಹಗಳು ಅಷ್ಟೇ ಆಶ್ಚರ್ಯಕರವಾಗಿವೆ. ತುರ್ಕಸ್ತಾನದಲ್ಲಿ ಹುಲಿ ಚರ್ಮ ಹೊದಿಸಿ ಪೈಜಾಮ ಧರಿಸಿದವನಾಗಿದ್ದಾನೆ. ಸಯಾಮದಲ್ಲಿ ಆಮೆವಾಹನವುಳ್ಳವನಾಗಿದ್ದಾನೆ.

ಕಾಂಬೋಡಿಯಾದಲ್ಲಿ ಪೂರ್ಣ ಬೌದ್ಧನಾಗಿ ಪದ್ಮಾಸನವುಳ್ಳವನಾಗಿದ್ದಾನೆ. ನೇಪಾಳದಲ್ಲಿ ಪಂಚಮುಖವುಳ್ಳವನಾಗಿ ರಾಕ್ಷಸವೇಷಧಾರಿಯಾಗಿದ್ದಾನೆ. ಜಾವಾದಲ್ಲಿ ಎರಡು ಮುಖವುಳ್ಳವನಾಗಿ ಮುಂದಿನ ಮುಖ ಗಣಪತಿಯದು ಹಿಂದಿನ ಮುಖ ಯಕ್ಷನದಾಗಿದೆ. ಜಪಾನದಲ್ಲಿ ಗಣೇಶಿಯೊಂದಿಗೆ ಮೋಜಿನಿಂದ ಕುಳಿತಿದ್ದಾನೆ. ಗಣೇಶಿಯೆಂದರೆ ಬೌದ್ಧ ಪುರಾಣದ ಪ್ರಕಾರ – ವಿನಾಯಕನುದುಷ್ಟರ ನಾಯಕನಾಗಿ ಎಲ್ಲ ಕಡೆಗೂ ಹಾವಳಿಯನ್ನು ಮಾಡುತ್ತಿರುವಾಗ ಅವನ ಹಾವಳಿಯನ್ನಡಗಿಸಲು ಬೋಧಿಸತ್ವವು ಒಳ್ಳೆಯ ಸುಂದರಿಯಾಗಿ, ಮಾಯಾ ಸ್ವರೂಪಿಯಾಗಿ ಗಣಪ್ಪನನ್ನು ತನ್ನ ಬಲೆಯಲ್ಲಿ ಹಾಕಿಕೊಂಡು ಅವನ ಹಾವಳಿಯನ್ನಡಗಿಸುತ್ತಾಳೆ. ಮಧ್ಯ ಏಶಿಯಾ,ಟಿಬೇಟ, ನೇಪಾಳ, ಬಾಲಿದ್ವೀಪ ಮುಂತಾದ ದೇಶಗಳಲ್ಲಿ ಅವನ ಆರಾಧಕರು ಇದ್ದಾರೆ. ಮಹಾಯಾನ ಪಂಥದ ಬೌದ್ಧರೂ ಗಣಪತಿಯ ಆರಾಧಕರು. ಗಣಪತಿಗೆ ೨೧ರ ಅಂಕೆ ಬಲು ಪ್ರಿಯವಾದುದು. ಎಂತಲೆ 'ಏಕವಿಂಶತಿ ಪತ್ರಿಪೂಜೆ'-೨೧ ಪತ್ರಿಗಳ ಪೂಜೆ ಸಲ್ಲುತ್ತದೆ. ಈ ಪತ್ರಿಗಳಲ್ಲಿ ಆಯುರ್ವೇದ ಔಷಧದ ಗುಣವಿದೆ. ೨೧ ಮೋದಕಗಳ ನೈವೇದ್ಯವಾಗುತ್ತದೆ. ೨೧ ನಮಸ್ಕಾರಗಳ ಅಗ್ರಪೂಜೆ ಈತನಿಗೆ ಸಲ್ಲುತ್ತದೆ. ಈತನು ಕರ್ಮದೇವತೆ, ಅಂತೂ ವಿದ್ಯೆ-ವಿಘ್ನಗಳ ಪ್ರತೀಕನಾದಂತಹ ವಿನಾಯಕನನ್ನು ಭಯ-ಭಕ್ತಿಯಿಂದ ಪೂಜಿಸಿ, ಧ್ಯಾನಿಸಿ, ನಮಿಸಿ ಅವನ ಮಹಿಮೆ ಅರಿತು ಜ್ಞಾನಾರ್ಜನೆ ಮಾಡಿದರೆ ಮಾನವನ ಬಾಳು ಬಂಗಾರವಾಗಿ ಹೆಚ್ಚು ಸಾರ್ಥಕವಾಗಬಹುದಲ್ಲವೆ?

ನವರಾತ್ರಿ ಮತ್ತು ವಿಜಯದಶಮಿ

ಆಶ್ವಯುಜ ಮಾಸದ ಶುಕ್ಲಪಕ್ಷದ ಪಾಡ್ಯದಿಂದ ದಶಮಿಯು ವರೆಗೆ ನಾಡಿನಲ್ಲೆಲ್ಲಾ ನವರಾತ್ರೋತ್ಸವವು ವಿಜೃಂಭಣೆಯಿಂದ ಆಚರಿಸಲ್ಪಡುತ್ತದೆ. ಸ್ವಾತಂತ್ರ್ಯಪೂರ್ವದಲ್ಲಿ ರಾಜರುಗಳು ಮಹಾ ಮಾಂಡಲಿಕರು ಮತ್ತು ಸಂಸ್ಥಾನಿಕರು ಈ ಹಬ್ಬವನ್ನು ವೈಭವ ದಿಂದ ಆಚರಿಸುತ್ತಿದ್ದರು. "ಅಸತ್ಯದ ಮೇಲೆ ಸತ್ಯದ ಜಯು" "ಅಧರ್ಮದ ಮೇಲೆ ಧರ್ಮದ ಜಯುವೇ" ಈ ಹಬ್ಬದ ಮೂಲ ಗುರಿಯಾಗಿದೆ. ಈ ಹಬ್ಬವು ಪ್ರಕೃತಿಮಾತೆಯ ಪೂಜೆಯಾಗಿರು ವದರಿಂದ ಕೃಷಿಪ್ರಧಾನವಾದ ಈ ದೇಶದ ಹಿಂದೂಗಳಿಗೆ ಇದು ಮಹತ್ವದ ಹಬ್ಬವಾಗಿದೆ.

ಪೌರಾಣಿಕ ಹಿನ್ನೆಲೆ: ಕೃಷಿಗೆ ಶರದ್ ಋತುವಿನಲ್ಲೂ ವಸಂತ ಋತುವಿನಲ್ಲೂ ಹಲವಾರು ಸೋಂಕುರೋಗಗಳು ತಗಲುವ ದುಂಟು. ಇದನ್ನು ಹೋಗಲಾಡಿಸುವದಕ್ಕಾಗಿ ಮಾತೃಸ್ವರೂಪಿ ಯಾದ ಪ್ರಕೃತಿದೇವಿಯ ಪೂಜೆಯನ್ನು ಮಾಡುವದೆ ಮುಖ್ಯ ಉದ್ದೇಶವಿರಬಹುದು. ಒಂಭತ್ತು ದಿವಸಗಳ ವರೆಗೆ ನಂದಾದೀಪ ವನ್ನಿರಿಸಿ ದೇವಿಯನ್ನು ಆರಾಧಿಸಿದ ನಿಮಿತ್ತ 'ನವರಾತ್ರಿ'ಯೆಂದು ಹೆಸರು ಬಂದಿದೆ.

ಪುರಾತನ ಸಂಸ್ಕೃತಿಗಳಾದ ಅಸ್ಸಿರಿಯನ್. ಬ್ಯಾಬಿಲೋನಿ ಯನ್, ಸುಮೇರಿಯನ್, ಇಜಿಪ್ಷಿಯನ್, ಕ್ರೀಟನ್ ಇತ್ಯಾದಿ ಪ್ರದೇಶಗಳಲ್ಲಿ ಮಾತೃದೇವತೆ, ಕನ್ಯೆ, ಮಾತೆ, ಯೋಧೆ, ಪುನರ್ಜನ್ಮ ದಾತೆ ಮತ್ತು ಮೋಕ್ಷಪ್ರದೆ ಮುಂತಾದ ರೂಪಗಳಲ್ಲಿ ಕಂಡು ಬರು

ವಳು. ಪ್ರಕೃತಿ ಅಥವಾ ಮಾಯೆಯ ಎರಡು ಶಕ್ತಿಗಳಾದ ಆವರಣ ಮತ್ತು ವಿಕ್ಷೇಪಗಳ ಪ್ರತೀಕವಾದುದರಿಂದ ಪರಾಶಕ್ತಿಯ ಸೌಮ್ಯ ಮತ್ತು ಕ್ರೂರ ಆಕಾರಗಳು ಭಾರತೀಯ ಸಂಸ್ಕೃತಿಯಲ್ಲಿ ವೇದಗಳ ಯುಗದಿಂದಲೂ ಕಂಡು ಬರುವವು. ಹರಪ್ಪ ಸಂಸ್ಕೃತಿಯ ಮಾತೃ ಪೂಜೆ ಅಥರ್ವಣ ವೇದವನ್ನನುಸರಿಸಿದೆ.

ದಕ್ಷಿಣ ಭಾರತೀಯರಿಗೆ ದುರ್ಗೆಯು ಮಹಿಷಾಸುರನನ್ನು ಸಂಹರಿಸುವದಾದರೆ ಉತ್ತರ ಭಾರತದವರಿಗೆ ರಾಮನು ಇಂದೇ ರಾವಣನನ್ನು ಸಂಹರಿಸಿ ವಿಜಯಿಯಾದ ದಿನ. ಮಹಾಭಾರತದಲ್ಲಿ ಶಮೀವೃಕ್ಷದ ಪೂಜೆ ವಿಜಯದಶಮಿಯ ಸೀಮೋಲ್ಲಂಘನದಲ್ಲಿ ಶಮೀಪೂಜೆ, ರಾಮನು ಶಮಿಯನ್ನು ಪೂಜಿಸಿದ್ದು, ಪಾಂಡವರು ಅಜ್ಞಾತವಾಸ ಮುಗಿಸಿ ಶಮೀ ಗಿಡದಲ್ಲಿ ಅಡಗಿಸಿಟ್ಟ ಶಸ್ತ್ರಾಸ್ತ್ರ ಗಳನ್ನು ಪೂಜಿಸಿ ಲೋಕಕ್ಕೆ ನಿಜರೂಪ ತೋರಿಸಿದ ದಿನವಾಗಿದೆ. ಅಂದು ಸಂತೋಷದ ಸಂಕೇತವಾಗಿ ಬಂಗಾರವನ್ನು ಪಾಂಡವರು ಹಂಚಿರಬೇಕು. ಇಂದೂ ಸಹ ಬಂಗಾರದ ಭಾವನೆಯಲ್ಲಿ ಬನ್ನಿ ಯನ್ನು ಆಪ್ತೇಷ್ಟರಿಗೆ ಕೊಡುತ್ತೇವೆ.

ಮಾರ್ಕಂಡೇಯ ಪುರಾಣದಲ್ಲಿ — ಮಹಾ ಮಾಯೆಯು ಮನುಷ್ಯನ ಆತ್ಮದಲ್ಲಿ ಪ್ರೀತಿಯನ್ನು ತುಂಬಿ ಒಬ್ಬರನ್ನೊಬ್ಬರು ಹೊಂದಿಕೊಳ್ಳುವಂತೆ ಮಾಡುವದು. ದೇವಿಗೆ ಕಾಯುವ ಹಾಗೂ ಕೊಲ್ಲುವ ಶಕ್ತಿಯುಂಟು. ಇದು ಕ್ಷತ್ರಿಯರ ಹಬ್ಬವು. ಆಶ್ವಯುಜ ಶುದ್ಧ ಪಾಡ್ಯದಿಂದ ೯ ದಿನಗಳ ವರೆಗೆ ಈ ಉತ್ಸವ ಆಚರಿಸು ವರು. ಎಲ್ಲ ದಿನಗಳಲ್ಲೂ ವಿಶೇಷಪೂಜೆ, ನಂದಾದೀಪ ಪ್ರತಿಷ್ಠಾ ಪನೆ, ಪುರಾಣ ಪಠಣ, ಉತ್ಸವ ಮತ್ತು ಉಪವಾಸ. ಉತ್ಸವದ

ಐದನೆಯ ದಿನದಂದು ಒಂಭತ್ತುಜನ ಕನ್ನಿಕೆಯರನ್ನು ಪೂಜಿಸುವ ಸಂಪ್ರದಾಯಕ್ಕೆ 'ಲಲಿತ ಪಂಚಮಿ' ಎಂದು ಹೆಸರು. ಎಂಟನೆಯ ದಿನ ಮಹಿಷಾಸುರನನ್ನು ಶಕ್ತಿಮಾತೆಯು ಸಂಹರಿಸಿದ ದಿನ. ಆತನ ತಲೆಯೊಡೆದ ಸಂಕೇತಕ್ಕಾಗಿ ಈಗಲೂ ದೊಡ್ಡದೊಂದು ಕುಂಬಳ ಕಾಯಿ ಒಡೆಯುವರು. ಶ್ರೀಶಕ್ತಿದೇವತೆಯನ್ನು ನಾವು ಒಂಭತ್ತು ಸ್ವರೂಪಗಳಲ್ಲಿ ಕಾಣಬಹುದು – ಕುಮಾರಿ, ತ್ರಿಮೂರ್ತಿ, ಕಲ್ಯಾಣಿ, ರೋಹಿಣಿ, ಕಾಲಿಕಾ, ಚಂದಿರಾ, ಶಾಂಭವಿ, ದುರ್ಗಾ ಮತ್ತು ಸುಭದ್ರಾ.

ಕ್ಷತ್ರಿಯರ ಉತ್ಸವ : ವಾರ್ಷಿಕ ಉತ್ಸವಗಳಲ್ಲಿ ಶ್ರಾವಣಿಯು ಬ್ರಾಹ್ಮಣರ ಹಬ್ಬ, ದಸರಾ ಕ್ಷತ್ರಿಯರ ಹಬ್ಬ, ದೀಪಾವಳಿ ವೈಷ್ಣವರ ಹಬ್ಬ, ಗಣೇಶಪೂಜೆ ಶೂದ್ರರ ಹಬ್ಬ. ಶಾಕ್ತರು ನವರಾತ್ರಿಯಂದು ದೇವಿಪೂಜೆ ಮಾಡಿದರೆ, ರಾಜರು ಈ ಸಮಯದಲ್ಲೆ ದಂಡಯಾತ್ರೆ ನಡೆಸುತ್ತಿದ್ದರು. ವಿಜಯದಶಮಿಯ ದಿನ ಸೀಮೋಲ್ಲಂಘನ ಮಾಡಿ ಅನಂತರ ಶಮೀಪೂಜೆ ಮಾಡುವ ಪದ್ಧತಿ ಇದ್ದಿತು. ರಾಜರು ದಿಗ್ವಿಜಯಕ್ಕೆ ವಿಜಯದಶಮಿಯಂದೇ ಹೊರಡುತ್ತಿದ್ದರು. ಆದರೆ ರಾಜರಿಲ್ಲದ ಇಂದಿನ ಪ್ರಜಾಪ್ರಭುತ್ವದಲ್ಲಿ ಅದು ಸಾಂಪ್ರದಾಯಿಕವಾಗಿ ಉಳಿದುಕೊಂಡು ಬಂದಿದೆ. ಎಂಟನೆಯ ದಿನದಂದು ಖಂಡೆಯ ಪೂಜೆ ಎಂದು ಮಾಡುವರು. ಅದು ಸರಸ್ವತಿಯ ದಿನ. ಮಕ್ಕಳು ಪುಸ್ತಕ ಪೂಜೆ, ಸಂಗೀತಗಾರರು ವಾದ್ಯಪೂಜೆ, ಕ್ಷತ್ರಿಯರು ಆಯುಧಪೂಜೆ, ಇನ್ನುಳಿದವರು ತಮ್ಮ ತಮ್ಮ ಉದ್ಯೋಗದ ಸಾಮಾನು ಪೂಜಿಸುವರು.

ವಿಜಯದಶಮಿ : ರಾವಣನನ್ನು ಜಯಿಸಿದ ರಾಮನು ಆಶ್ವೀಜ ಶುದ್ಧ ದಶಮಿಯ ದಿವಸ ತನ್ನ ರಾಜಧಾನಿಯಾದ ಅಯೋಧ್ಯೆಯ ಕಡೆಗೆ ಪ್ರಯಾಣ ಮಾಡಿದ್ದರಿಂದ ಆ ದಿವಸಕ್ಕೆ 'ದಸಹರಾ' ಎಂದು ಅನ್ನುವದುಂಟು. ವಿಜಯದಶಮಿ ಶುಭದಿನ ವಾಗಿದೆ. ಅಂದಿನ ದಿನ ಎಂತಹ ಮಹತ್ವದ ಕೆಲಸವನ್ನು ಮಾಡಿ ದರೂ ಜಯ ಕಟ್ಟಿಟ್ಟದ್ದು. ಭಾರತೀಯರಿಗೆ ನವರಾತ್ರಿ-ವಿಜಯ ದಶಮಿಗಳು ದೃಢಸಂಕಲ್ಪವನ್ನು ಆಧ್ಯಾತ್ಮದ ವೃದ್ಧಿಯನ್ನು, ಸತ್ವಗುಣವನ್ನು ದಯಪಾಲಿಸುವ ಸುದಿನವೆಂದೇ ಹೇಳಬೇಕು. ಇದು ಈ ಹಬ್ಬದ ವಾಸ್ತವಿಕ ಉದ್ದೇಶ.

ಸೀಗೆ ಹುಣ್ಣಿವೆ : 'ಸೀಗೆ' ಎಂದರೆ ಸಿಹಿಯೆಂದೂ, ಮಧುರ ವೆಂದೂ ಅರ್ಥವಿದೆ. ಜೀವನದ ಮಾಧುರ್ಯ ಸವಿಬದುಕಿನ ಸೂಚನೆ ಈ ಹುಣ್ಣಿವೆಯಲ್ಲಿದೆ. ಮುಂಗಾರಿ ಬೆಳೆಗಳ ಸುಗ್ಗಿಯೇ ಸೀಗೆ ಹುಣ್ಣಿವೆಯ ಸಂಕೇತ. ಬೆಳವಲನಾಡಿನಕ್ಕಿಂತಲೂ ಮಲೆನಾಡಿ ನಲ್ಲಿ ಇದು ಹೆಚ್ಚು ವೈಭವದಿಂದ ಆಚರಿಸುವ ಒಕ್ಕಲಿಗನ ಸಂತಸದ ಹಬ್ಬವಾಗಿದೆ.

ದೀಪಾವಳಿ

ಮನೆಮನೆಗಳನ್ನು ದೀಪಗಳ ಸಾಲು ಬೆಳಗುತ್ತಿರುವದರಿಂದ ದೀಪಾವಳಿ ಹಬ್ಬವೆನಿಸಿದೆ. ಇದಕ್ಕೆ ಉತ್ತರ ಕರ್ನಾಟಕದಲ್ಲಿ 'ಹಟ್ಟಿಹಬ್ಬ'ವೆಂದು ಹೆಸರು. ಹಟ್ಟಿ-ದನದ ಕೊಟ್ಟಿಗೆ. ಅಲ್ಲಿ ರುವ ಎಲ್ಲ ವಸ್ತುಗಳನ್ನು ಪೂಜಿಸುವದು ಸಂಪ್ರದಾಯ. ಪಾಂಡ

ವರು ತಮ್ಮ ಒಂದು ವರುಷದ ಅಜ್ಞಾತವಾಸ ಮುಗಿಸಿ ಕೌರವ ರಿಂದ ಒಯ್ಯಲ್ಪಟ್ಟ ಗೋವುಗಳನ್ನು ಗೆದ್ದು ಅಂದೇ ಎಲ್ಲರೂ ವಿರಾಟರಾಜನಲ್ಲಿ ಕಾಣಿಸಿಕೊಂಡ ಐಕ್ಯತೆಯ ಸಂಕೇತಕ್ಕಾಗಿ 'ಪಾಂಡ ವರು' ಎಂದು ಶಗಣಿಯನ್ನಿಟ್ಟು ಪೂಜಿಸುವರು.

ಒಂದು ದಂತಕತೆ ಹೀಗಿದೆ—ಹಿಂದೆ ಹೈಮ ಎಂಬ ಅರಸ ನಿಗೆ ಒಬ್ಬ ಮಗನಿದ್ದ. ಮಗನ ಮದುವೆಯಾಗಿ ನಾಲ್ಕನೆಯ ದಿನವೇ ಸರ್ಪದೋಷದಿಂದ ಅವನ ಮರಣವಾಯಿತು. ಆತನ ಹೆಂಡತಿ ಗಂಡನ ಅಕಾಲ ಮರಣದಿಂದ ಗೋಳಿಟ್ಟಳು. ಯಮ ದೂತರು ಅವಳ ದುಃಖವನ್ನು ನೋಡಲಾರದೆ ಯಮರಾಯನಲ್ಲಿ ಹೇಳಲು ಆತ 'ದೀವಳಿಗೆ ಹಬ್ಬದೊಳಗೆ ಧನತ್ರಯೋದಶಿಯಿಂದ ಐದು ದಿವಸಗಳ ವರೆಗೆ ಯಾರ ಮನೆಯಲ್ಲಿ ಸಾಲುದೀಪಗಳು ಬೆಳಗುವವೋ ಅಂಥವರಿಗೆ ಅಪಮೃತ್ಯುವಿಲ್ಲ'ವೆಂದು ಹೇಳಿದ ಕಾರಣ ಈ ದೀಪಗಳನ್ನು ಹಚ್ಚುವ ರೂಢಿ ಬಂದಿದೆ.

ದೀಪಾವಳಿ ಬಹು ಪುರಾತನ ಹಬ್ಬ. ಶಾಸನಗಳಲ್ಲಿ ಇದರ ಉಲ್ಲೇಖ ದೊರೆಯುತ್ತದೆ. ನರಕಾಸುರನ ಸಂಹಾರೋತ್ಸವ, ಬಲೀಂದ್ರಪೂಜೆ, ಗೋಪೂಜೆಗಳು ಇಲ್ಲಿ ಮುಖ್ಯವಾದುವು. ಬಲಿ ಚಕ್ರವರ್ತಿ ಭಾಗವತ ಪ್ರಸಿದ್ಧನಾದ ಮಹಾಭಕ್ತನಲ್ಲದೆ ದಾನಶೀಲ. ಅಂತಹ ಭಕ್ತನ ಸ್ಮರಣೆ ಮತ್ತು ಭಾರತೀಯರಿಗೆ ಪೂಜ್ಯವಾದ ಗೋವಿನ ಅರ್ಚನೆ ದೀಪಾವಳಿಯಲ್ಲಿ ಆಗಬೇಕಾದದ್ದು.

ಇದು ಮೂರು ದಿವಸದ ಹಬ್ಬ. ಪ್ರಥಮದಿನ ನರಕ ಚತುರ್ದಶಿ. ಅಂದು ನರಕಾಸುರನ ವಧೆಯಾಗಿರುವದರಿಂದ ಹರಿ ಭಕ್ತರಿಗೆ ಹಬ್ಬವೆನಿಸಿದೆ. ಅಂದು ಮನೆಯಲ್ಲಿ ಮಂಗಲಾರತಿಯನ್ನು

ಮುತ್ತೈದೆಯರು ಗಂಡಸರಿಗೆ ಮಾಡುವರು. ಅಮಾವಾಸ್ಯೆ–ಇದು ಎರಡನೆಯ ದಿನದ ಆಚರಣೆ. ವರ್ತಕರು ಅಂದು ಲಕ್ಷ್ಮೀ, ಸರಸ್ವತಿ ಪೂಜೆ ಮಾಡುವರು. ದೀಪಾವಳಿ ವ್ಯಾಪಾರಸ್ಥರ ವ್ಯವಹಾರಕ್ಕೆ ಶುಭದಿನ. ವಿಕ್ರಮಸಂವತ್ಸರದ ಪ್ರಕಾರ ಉತ್ತರ ಭಾರತದವರು ವ್ಯಾಪಾರದ ಲಾಭ-ನಷ್ಟಗಳನ್ನು ತೆಗೆಯುವರು. ದಕ್ಷಿಣಭಾರತೀಯರಿಗೆ ಶಾಲಿವಾಹನಶಕೆ ಮಹತ್ವದ್ದಾಗಿರುವದರಿಂದ ಯುಗಾದಿಯಂದು ತಮ್ಮ ಲಾಭ-ನಷ್ಟ ನೋಡುವರು.

ಕಾರ್ತಿಕ ಶುದ್ಧ ಪ್ರತಿಪದೆ : ಈ ದಿವಸ ವಿಷ್ಣು ವಾಮನಾವತಾರದಿಂದ ಬಲಿಚಕ್ರವರ್ತಿಯನ್ನು ಪಾತಾಳಕ್ಕೆ ಮೆಟ್ಟಿದ ಪೌರಾಣಿಕ ಕತೆಯ ಹಿನ್ನೆಲೆಯೇ ಬಲಿಪ್ರತಿಪದೆಯೆಂದು ಹೆಸರಾಗಿದೆ. ಬಲಿಯ ನೆನಹಿಗಾಗಿ ಹಿಟ್ಟಿನ ಇಲ್ಲವೆ ಶಗಣಿಮೂರ್ತಿ ಮಾಡಿ ಪೂಜಿಸುವರು.

೧) ಲಂಕೆಯಿಂದ ಮರಳಿ ಬಂದ ರಾಮನ ಪಟ್ಟಾಭಿಷೇಕ.

೨) ಪಾಂಡವರು ಅಜ್ಞಾತವಾಸ ಮುಗಿಸಿ ಪ್ರಕಟವಾದ ದಿನ.

೩) ಬಲಿಷ್ಠರಾಜ ವಿಕ್ರಮನ ರಾಜ್ಯಾಭಿಷೇಕ.

ಈ ದಿನವೇ ಮೇಲಿನವೆಲ್ಲವೂ ನಡೆದಿರುವದರಿಂದ ವಿಜಯದಶಮಿ ಮಹತ್ವದ ದಿನವಾಗಿದೆ. ಅಂದಿನ ದಿನ ಹಾರಾಡುವ ಆಕಾಶಬುಟ್ಟಿಗಳು ಸ್ವರ್ಗಲೋಕದ ಹಿರಿಯ ಜೀವಿಗಳಿಗೆ ಮಾರ್ಗವನ್ನು ತೋರಿಸುವ ಜ್ಯೋತಿಯ ಸಂಕೇತವಾಗಿವೆ ಎಂದು ಕಲ್ಪಿಸಬಹುದು.

ಭಾರತದ ಆದ್ಯಂತ ಹಬ್ಬ ಎಲ್ಲರಿಗೂ ಒಂದೆಯಾದರೂ ಆಚರಿಸುವ ಕ್ರಮ ಬೇರೆಯಾಗಿದೆ. ಹಿಂದುಗಳು ಮೇಲಿನ ಪದ್ಧತಿ

ಯುಂತೆ ಆಚರಿಸಿದ್ದಾದರೆ, ಜೈನರು ಮಹಾವೀರನ ದಿವ್ಯ ಜ್ಯೋತಿ ಮಾಯವಾದ ದಿನವೆಂದು ತಿಳಿದು ನಾಲ್ಕು ದಿನಗಳ ವರೆಗೆ ಆಚರಿಸುತ್ತಾರೆ. ಭೌಗೋಲಿಕವಾಗಿ ಈ ಕಾಲದಲ್ಲಿ ಸೂರ್ಯನು ಉತ್ತರಾಯಣ ಬರಲೆಂದು ಆಶಿಸಿ ಪೂಜಿಸುವ ರೂಢಿಯೂ ಇದೆ. ಈ ವೇಳೆಯಲ್ಲಿ ಮುಂಗಾರು ಬೆಳೆಯ ಧಾನ್ಯಗಳ ಆಗಮನ. ಹಿಂಗಾರು ಬಿತ್ತಿಗೆಗೆ ಹದವನ್ನು ತಂದುಕೊಟ್ಟು ನಾಟಿದ ಎಳೆಯ ಸಸಿಗಳಿಗೆ ಜೀವರಸವನ್ನು ಎರೆಯುತ್ತಿರುವ ಈ ಹಬ್ಬದ ಸಂಕ್ರಮಣ ಕಾಲವು ಅನ್ನದೇವರ ಅವತಾರ ಕಾಲವೆಂದೇ ಕರೆಯಬಹುದು.

ಒಟ್ಟಾರೆ ದೀಪಾವಳಿಯ ಆಚರಣೆಯಿಂದ ದೇಹ ಮನಸ್ಸು ಗಳಿಗೆ ಸುಖಶಾಂತಿ ಲಭಿಸಿ ಆತ್ಮೋನ್ನತಿ ದೊರೆತು, ನರಕಾಸುರ ರಂತಹ ದುಷ್ಟಶಕ್ತಿಗಳ ದಮನವಾಗಿ, ಬಲೀಂದ್ರನಂಥ ತ್ಯಾಗ ಜೀವನ ನಮ್ಮಲ್ಲಿ ಬೆಳೆದು ಎಲ್ಲರೂ ಮನುಷ್ಯರಾಗಿ ಬಾಳೋಣ ಎಂಬುದೇ ಶುಭಸಂದೇಶವಾಗಿದೆ.

ಎಳ್ಳ ಅಮಾವಾಸ್ಯೆ : ಮಾರ್ಗಶೀರ್ಷದ ೩೦ನೆಯ ತಿಥಿಯೇ ಎಳ್ಳು ಅಮಾವಾಸ್ಯೆಯು. ಮುಂಗಾರು ಬೆಳೆಯ ನಾಡಿನಲ್ಲಿ ಸೀಗೆ ಹುಣ್ಣಿವೆಯು ಒಕ್ಕಲಿಗರ ವಿಶಿಷ್ಟ ಹಬ್ಬವಾಗಿರುವಂತೆ ಹಿಂಗಾರು ಬೆಳೆಯ ಪ್ರದೇಶದಲ್ಲಿ ಎಳ್ಳು ಅಮಾವಾಸ್ಯೆ ಒಕ್ಕಲಿಗರ ಮಹತ್ವದ ಹಬ್ಬವಾಗಿದೆ. ಎಳ್ಳು ಹೋಳಿಗೆ, ಕರೆಗಡಬು ಇಂದಿನ ಪಕ್ವಾನ್ನದ ವೈಶಿಷ್ಟ್ಯ. 'ಹುಲ್ಲುಹುಲ್ಲಿಗೋ ಸುರಾಂಬಳಿಗೋ' ಅನ್ನುವ ಒಕ್ಕಲಿಗನ ನುಡಿಯು – ಪ್ರತಿ ಹುಲ್ಲಿಗೆ ಕಾಳು ಸೂರೆಯಾಗಲಿ ಅನ್ನುವದು: ಸೃಷ್ಟಿದೇವಿ ಅಂದು ಮೈತುಂಬಿ ಭೂಮಿಯೆಲ್ಲಾ ಹಸಿರಾಗಿ ನಗು ನಗುತ್ತಾ ನಿಂತಿರುವ ದೃಶ್ಯ ನಿಜವಾಗಲೂ ರಮಣೀಯವಾದುದು.

ಮಕರಸಂಕ್ರಮಣ

ಜನೇವರಿ ೧೪ ಪ್ರತಿವರ್ಷದ ಸಂಕ್ರಮಣದ ದಿನವೆನ್ನಬಹುದು. ಸೂರ್ಯನು ಒಂದು ರಾಶಿಯಿಂದ ಮತ್ತೊಂದು ರಾಶಿಗೆ ಹೋಗುವದಕ್ಕೆ ಸಂಕ್ರಾಂತಿ ಎಂದು ಹೆಸರು. ರವಿಯು ಮಕರವೃತ್ತದಿಂದ ಕರ್ಕಾಟಕವೃತ್ತದ ಕಡೆಗೆ ಚಲಿಸಲು ಆರಂಭಿಸುತ್ತಾನೆ. ತಮಿಳಿನಲ್ಲಿ ಈ ಹಬ್ಬಕ್ಕೆ 'ಪೊಂಗಲ್' ಎಂದು ಕರೆಯುವರು. ಅಂದು ಸೂರ್ಯನಿಗೆ ಹೆಚ್ಚಿನ ಪ್ರಾಧಾನ್ಯತೆ, ಎರಡನೆಯ ಪೂಜೆ ವಾಯುವಿಗೆ. ವಾಯುವು ವರ್ಷಾಕಾಲದ ಸಂಕೇತ. ಮೂರನೆಯದು ಗೃಹದೇವತಾ ಪೂಜೆ. ಇದರಿಂದ ಸರ್ವರಿಗೂ ಸುಖಜೀವನ ಒರಲೆಂದು ಆಶಿಸಲಾಗುವದು. ಸಂಕ್ರಾಂತಿಯ ಮರು ದಿನ ಗೋವುಗಳ ಪೂಜೆ ಮಾಡುತ್ತಾರೆ. ಗೋವು ಜಗತ್ತಿಗೆ ಅನ್ನ ನೀಡುವ ಬಸವಣ್ಣನನ್ನು ಕೊಡುತ್ತಿದೆ. ಹಿಂದುಗಳಿಗೆ ಗೋವಿನ ಬಗೆಗೆ ಬಹಳ ಶ್ರದ್ಧೆ. ಹಿಂದಿನ ಕಾಲದಲ್ಲಿ ಕಣ್ವಋಷಿಗಳು ಶಕುಂತಲೆ ಗಂಡನ ಮನೆಗೆ ಹೋಗುವಾಗ ಆಕಳುಗಳನ್ನೇ ಬಳುವಳಿಯಾಗಿ ಕೊಟ್ಟ ಉಲ್ಲೇಖವಿದೆ. ಇಂದೂ ಸಹ ನಮ್ಮ ಸ್ತ್ರೀಯರು ಗಂಡನ ಮನೆಗೆ ಹೋಗುವಾಗ 'ಬಳೂಲಿ' ಎಂದು ಅವುಗಳನ್ನು ಒಯ್ಯುವ ಪರಂಪರೆ ಉಳಿದುಕೊಂಡು ಬಂದಿದೆ.

ಆ ಮಕರಸಂಕ್ರಾಂತಿಯಂದು ಪವಿತ್ರ ನದಿಗಳಲ್ಲಿ ಎಲ್ಲರೂ ಸ್ನಾನಮಾಡಿ ಸಿಹಿ ಊಟ ಉಂಡು ಆನಂದದಿಂದ ಇರುತ್ತಾರೆ. ಅಂದು ಎಳ್ಳು-ಬೆಲ್ಲವನ್ನು ಪರಸ್ಪರ ಕೊಟ್ಟು ತೆಗೆದುಕೊಂಡು ಜೀವನದಲ್ಲಿಯ ಸುಖದುಃಖಗಳಿಗೆ ಎಲ್ಲರೂ ಸಮಭಾಗಿಗಳು

ಎನ್ನುವದನ್ನು ತೋರಿಸುತ್ತಾರೆ. ದಕ್ಷಿಣದಲ್ಲಿ ಈ ಹಬ್ಬವನ
ವೈಭವದಿಂದ ಆಚರಿಸುತ್ತಾರೆ.

ಮಹಾಶಿವರಾತ್ರಿ

ಮಾಘ ಬಹುಳ ೧೪ನೆಯ ತಿಥಿಯೇ ಮಹಾಶಿವರಾತ್ರಿ
ಶಿವನಿಗೆ ಇಂದು ವಿಶೇಷ ಭಕ್ತಿ ಸಲ್ಲಿಸುವದೇ ಈ ಹಬ್ಬದ ವೈಶಿಷ್ಟ
ಬ್ರಾಹ್ಮಣ, ಕ್ಷತ್ರಿಯ, ಶೂದ್ರ, ವೈಶ್ಯ, ಅಸ್ಪೃಶ್ಯ, ಸ್ತ್ರೀಪುರುಷ
ಬಾಲಕ ತರುಣ ಹಾಗೂ ವೃದ್ಧ ಎಲ್ಲರೂ ಈ ವ್ರತವನ್ನು ಮಾಡಲ
ಅರ್ಹರಾಗಿರುತ್ತಾರೆ. ಸಕಲ ಪ್ರಾಣಿಗಳಲ್ಲಿ ದಯೆಯನ್ನು ತೋ
ಸುವ ಸಿದ್ಧಾಂತವನ್ನು ಈ ಹಬ್ಬದಲ್ಲಿ ಪ್ರಮುಖವಾಗಿ ಇಟ
ಕೊಂಡ ಮಾತು ಅತ್ಯಂತ ಮಹತ್ವದ್ದಾಗಿದೆ. ಇಂದು ಅಭಿಷೇ
ಅರ್ಚನೆ, ಉಪವಾಸ, ಜಾಗರಣೆಗಳು ನಡೆಯುತ್ತವೆ. ಇವು ಬು
ವಿಕಾಸವನ್ನು ಮಾಡುತ್ತವೆ. ಶಿವಪುರಾಣದ ಪ್ರಕಾರ ಶಿವರಾ
ಯಂದು ಯಾರು ಪೂರ್ತಿ ರಾತ್ರಿ ಶಿವನಾಮ ಜಪಿಸುತ್ತ ಎಚ್ಚ
ದಿಂದಿರುವರೋ ಅವರಿಗೆ ಮುಕ್ತಿ ಸಿಕ್ಕೇ ತೀರುತ್ತದೆಂದು ಉಲ್ಲೇ
ವಿದೆ.

ಇಂದು ಭಕ್ಷ್ಯಭೋಜ್ಯಗಳ ವೈಭವವಿಲ್ಲ. ಶಿವರಾತ್ರಿಯಂ
ನಿಷ್ಠಾವಂತರಾಗಿ ಮನೋನಿರ್ಧಾರದಿಂದ ಪೂಜೆ ಪುರಸ್ಕಾ
ಕೈಕೊಂಡು ಉಪವಾಸವ್ರತಗಳನ್ನು ಪಾಲಿಸಿ, ಆಚಾರಶೀಲರಾ
ಸಂಪೂರ್ಣ ರಾತ್ರಿಯನ್ನು ಶಿವಧ್ಯಾನದಲ್ಲಿ ಕಳೆಯಬೇಕು. ಆದ
ಇಂದು ಟೊಳ್ಳು ಆಚರಣೆ ಮಾಡುವವಕ್ಕಾಗಿ ಸಿನೇಮಾಗ
ಹೋಗಿ ವೇಳೆ ಕಳೆಯುತ್ತಾರೆ.

ದಕ್ಷಿಣ ಭಾರತದಲ್ಲಿ ಪ್ರಚಲಿತವುಳ್ಳ ಬೇಡನ ಕಥೆಯಂತೆ ಉತ್ತರ ಭಾರತದಲ್ಲಿ ಉಜ್ಜನಿಯ ಚಂದ್ರಸೇನ ರಾಜನು ಪರಮ ಶಿವಭಕ್ತ. ಅವನಲ್ಲಿ ಚಿಂತಾಮಣಿಯೆಂಬ ಅನರ್ಘ್ಯ ರತ್ನವಿತ್ತು. ಅದನ್ನು ಪಡೆದುಕೊಳ್ಳುವದಕ್ಕಾಗಿ ರಾಜನ ಮಿತ್ರರೂ ಶತ್ರುಗಳೂ ಈತನ ಮೇಲೆ ದಾಳಿ ಮಾಡಿದರು. ಆಗ ರಾಜನು ನಿರುಪಾಯನಾಗಿ ಶಿವಧ್ಯಾನವನ್ನು ಮಾಡಲು ಪ್ರಾರಂಭಿಸಿದ. ಆ ರಾಜ ಮಾಡಿದ ಲಿಂಗದಂತೆ ಶ್ರೀಕರನೆಂಬ ಹುಡುಗ ಮಳಲಿನ ಲಿಂಗವನ್ನು ಸ್ಥಾಪನೆ ಮಾಡಿ ಮುಗ್ಧಭಕ್ತಿಯಿಂದ ಪೂಜಿಸತೊಡಗಿದ. ಅವನ ತಾಯಿ ಮಗು ಮಾಡಿದ ಕೆಲಸ ಹುಚ್ಚುತನದ್ದೆಂದು ತಿಳಿದು ಲಿಂಗವನ್ನು ಕಾಲಿನಿಂದ ಒದೆದು ಕೆಡಿಸಿದಳು. ಶ್ರೀಕರನು ಮತ್ತೆ ಲಿಂಗವನ್ನು ಮಾಡಿಕೊಂಡು 'ದೇವರೇ ನನ್ನ ಸೇವೆ ಸ್ವೀಕರಿಸು. ನನ್ನ ತಾಯಿ ಮಾಡಿದ ತಪ್ಪನ್ನು ಕ್ಷಮಿಸು' ಎಂದಾಗ ಲಿಂಗ ಇದ್ದಕ್ಕಿದ್ದಂತೆ ಹೊಳೆಹೊಳೆಯುವಂತಾಗಿ ಚಿನ್ನದ ದೇವಾಲಯವೇ ಆಯಿತು. ಆಗ ರಾಜನು ಬಂದು ನೋಡಿದ. ಅವನ ಮಿತ್ರ ಶತ್ರು ರಾಜರು ದರ್ಶನ ಪಡೆದು ಸಂತೋಷವುಳ್ಳವರಾಗಿ ಅವರು ತಮ್ಮ ಆಶೆ ಆಮಿಷಗಳನ್ನು ತೊರೆದು ಶಿವಭಕ್ತರಾದ ದಿನವಿದು.

ಶಿವರಾತ್ರಿಯು ಸ್ವಾಮಿ ದಯಾನಂದ ಸರಸ್ವತಿಯವರ ಜೀವನಘಟ್ಟವನ್ನೇ ಬದಲಿಸಿ ಅವರನ್ನು ಆಧ್ಯಾತ್ಮಿಕ ಮಾರ್ಗದ ಕಡೆಗೆ ಒಯ್ದಿದೆ. ಶಿವರಾತ್ರಿಯಲ್ಲಿ ಐದು ಬಗೆ ಇದೆ:

೧) ಮಹಾಶಿವರಾತ್ರಿ ೨) ಯೋಗ ಶಿವರಾತ್ರಿ ೩) ನಿತ್ಯ ಶಿವರಾತ್ರಿ ೪) ಪಕ್ಷ ಶಿವರಾತ್ರಿ ೫) ಮಾಸ ಶಿವರಾತ್ರಿ. ಇವುಗಳ ಆಚರಣೆಯ ರೀತಿ ಬೇರೆಬೇರೆಯಾಗಿದೆ.

ಶಿವರಾತ್ರಿ ವ್ರತದ ಮಹಿಮೆ ಮೃತ್ಯುವಿನಿಂದ ಅಮೃತದೆಡೆಗೆ ಅರ್ಥಾತ್ ಶಿವಲೋಕದೆಡೆಗೆ – ಒಯ್ಯುವದೇ ಆಗಿದೆ.

ಹೋಳಿ ಹುಣ್ಣಿಮೆ

ಫಾಲ್ಗುಣ ಶುದ್ಧ ೧೫ನೆಯ ತಿಥಿಯೇ ಕಾಮನ ಹುಣ್ಣಿಮೆ.

ಆನೆಗಂಬರಿ ಚಂದ ಕುದುರಿಗೆ ಥಡಿ ಚಂದ
ಸದರೀಗೆ ಚಂದ ಕಾಮಣ್ಣ, ಬಗಲಿಗ
ರೂಪಕ ಚಂದ ರತಿದೇವಿ,

ರೂಪದಲ್ಲಿ ಕಾಮಣ್ಣನೇ ಶ್ರೇಷ್ಠನೆಂದು ಪಾರ್ವತಿಯೇ ಹೇಳಿದ್ದಾಳೆ. ಕೋಗಿಲೆಯ ಕೂಗು, ವಸಂತದ ಆಗಮನ, ಪುಷ್ಪದ ಅರಳುವಿಕೆ ಇವೆಲ್ಲವು ಫಾಲ್ಗುಣಮಾಸದ ಪ್ರಕೃತಿಯಲ್ಲಿ ಬದಲಾವಣೆಯಾಗುತ್ತದಲ್ಲದೆ ಮನುಷ್ಯನೂ ಸಹ ಬದಲಾವಣೆಯಾಗುತ್ತಾನೆ. ೧೭ನೆಯ ಶತಮಾನದ ಜೀಮೂತವಾಹನನಿಂದ ಹೋಳಿಹುಣ್ಣಿಮೆಯು ಉಲ್ಲೇಖ ಬಂದಿದೆ. ಬಂಗಾಲದಲ್ಲಿ ಅದಕ್ಕೂ ಪೂರ್ವದಲ್ಲಿ ಆಚರಿಸುತ್ತಿದ್ದರು. ೧೬ನೆಯ ಶತಮಾನದ ವರೆಗೂ ಈ ಹಬ್ಬವನ್ನು ಪ್ರೇಮದೇವತೆಯಾದ ಮದನನ ಉತ್ಸವವೆಂದು ಆಚರಿಸುತ್ತಿದ್ದರು. ಶ್ರೀಕೃಷ್ಣರಾಧೆಯರು ಬಣ್ಣದ ಓಕಳಿ ಆಡುತ್ತಿದ್ದರು ಎಂಬ ಉಲ್ಲೇಖ ಭಾಗವತದಲ್ಲಿ ಅಲ್ಲಲ್ಲಿ ಬಂದಿದೆ. ಬಂಗಾಲದ ಚೈತನ್ಯನು ಇದಕ್ಕೊಂದು ಹೊಸ ಕಳೆ ನೀಡಿ ಪ್ರೀತಿಯ ದ್ಯೋತಕವಾದ 'ಕಾಮನ ಹಬ್ಬ' ಆಚರಿಸಲು ಹೇಳಿದನು. ರವೀಂದ್ರನಾಥ ಠಾಕೂರರು ಇದಕ್ಕೆ ಮತ್ತಿಷ್ಟು ಹೊಸ ಚೇತನ ನೀಡಿ ಸ್ತ್ರೀಪುರುಷರೆಲ್ಲರೂ

ಸಾಮೂಹಿಕವಾಗಿ ಓಕಳಿ ನೃತ್ಯವಾಡಲು ಹೇಳಿದರು. ಆದರೆ ಇಂದು ಜಗತ್ತು ಮತ್ತು ಜೀವನದ ಕಲ್ಪನೆಯೇ ಇಲ್ಲದಾಗಿ ಸಂಕುಚಿತ ಭಾವನೆ ಬಂದಿದೆ. ಹಬ್ಬದ ದಿನ ಬಡವ ಬಲ್ಲಿದ ಉಚ್ಚ-ನೀಚ ಭೇದಭಾವವಿಲ್ಲದೆ ಸ್ವಚ್ಛಂದತೆಯಿಂದ ರಂಗೋತ್ಸವವನ್ನು ಮಾಡುತ್ತಾರೆ. ರಂಗೋತ್ಸವವು ಪ್ರೇಮದ ದ್ಯೋತಕ. ಇದು ಭಾರತೀಯ ಸಭ್ಯತೆಯ ವಿಕಾಸವೆಂದು ಹೇಳಬಹುದು. ಆದರೆ ಇಂದು ಸ್ವಾತಂತ್ರ್ಯದಿಂದ ಅಶ್ಲೀಲ ಗೀತೆಗಳನ್ನು ಉಪಯೋಗಿಸಿ ನಿರ್ಲಜ್ಜತೆಯ ಸೀಮೆಯನ್ನು ದಾಟುವದು ಅಸಂಸ್ಕೃತಿಯ ಅಸಭ್ಯತೆಯ ದ್ಯೋತಕವಾಗಿದೆ.

ಈ ದಿನ ಮನ್ಮಥನನ್ನು ಶಿವನು ದಹಿಸಿದನಂತೆ. ಕಾಮವೇ ಮನುಷ್ಯನ ಸಕಲ ದುರಾಚಾರಗಳಿಗೂ ಸಕಲ ದೋಷಗಳಿಗೂ ಮೂಲ. ಕಾಮವೆಂದರೆ ಆಸೆ ಎಂದು ಶ್ರೀಕೃಷ್ಣ ಗೀತೆಯಲ್ಲಿ ಹೇಳಿದ್ದಾನೆ. ಮನುಷ್ಯನಿಗೆ ಕಾಮವು ಸದಾ ವೈರಿ. ಇದರ ದಮನವಾಗಲೇ ಬೇಕು.

ಹಬ್ಬದ ಹಿನ್ನೆಲೆ : ಹಿರಣ್ಯಕಶ್ಯಪುವಿಗೆ 'ಪ್ರೋಲಿಕಾ' ಎಂಬ ತಂಗಿ ಇದ್ದಳು. ಅವಳಿಗೆ ಅಗ್ನಿಯಿಂದ ಮರಣವೆಂಬ ಶಾಪವಾಗಿತ್ತು. ಹಿರಣ್ಯಕಶ್ಯಪುವಿನ ಮಗ ಪ್ರಲ್ಹಾದನು ಅನನ್ಯ ಹರಿಭಕ್ತ. ಆಸುರೀ ವೃತ್ತಿಯ ಹಿರಣ್ಯಕಶ್ಯಪುವಿಗೆ ಹರಿ ಎಂದರೆ ಆಗದು. ಮಗನ ಹರಿಯ ನಾಮಸ್ಮರಣೆ ಹಿರಣ್ಯಕಶ್ಯಪುವಿಗೆ ಸಹಿಸಲಿಲ್ಲ. ಎಷ್ಟು ಬೇಡವೆಂದು ಹೇಳಿದರೂ ಕೇಳದೆ ಹೋದ ಪ್ರಲ್ಹಾದನನ್ನು ಬೆಂಕಿಯಲ್ಲಿ ಹಾಕಿ ಸುಡಲು ತಂಗಿಗೆ ಹೇಳಿದಾಗ ಅವನ ಜೊತೆ ಅವಳೂ ಅಗ್ನಿಯಲ್ಲಿ ಹಾರಿ ಪ್ರಾಣನೀಗುವಳು. ಪ್ರಲ್ಹಾ-

ದನು ಮಾತ್ರ ಹರಿನಾಮದಿಂದ ಬದುಕಿದನು. ಆ ಪ್ರೋಲಿಕಾ ದಹನದ ಸ್ಮಾರಕವಾದ ಹುಣ್ಣಿಮೆಯ ತಿಥಿಯೇ ಹೋಳಿಹುಣ್ಣಿಮೆ ಎಂದಾಗಿದೆ.

ಕಾಮನನ್ನು ಸುಡುವದೇಕೆ? : ತಾರಕಾಸುರ ಬ್ರಹ್ಮನಿಂದ ವರ ಪಡೆದು ಭೂ-ದೇವ ಲೋಕಗಳಲ್ಲಿ ಸುರನರರಿಗೆಲ್ಲರಿಗೂ ತೊಂದರೆ ಕೊಡುತ್ತಿರುವಾಗ ದೇವತೆಗಳು ಸಹಿಸಲಾರದೆ ವಿಷ್ಣುವಿನ ಮೊರೆ ಹೊಕ್ಕರು. ಶಿವಪಾರ್ವತಿಯರ ಸಂಗಮದಿಂದ ಜನಿಸಿದ ಏಳುದಿನದ ಮಗು ಷಣ್ಮುಖ ಆತನನ್ನು ಕೊಲ್ಲಬಹುದು ಎಂದು ವಿಷ್ಣು ಅಪ್ಪಣೆಯಿತ್ತ. ಆದರೆ ಆಗ ಶಿವನು ಧ್ಯಾನದಲ್ಲಿದ್ದ. ಪಾರ್ವತಿ ವ್ರತನಿರತೆಯಾಗಿದ್ದಾಳೆ. ಅವರಿಗೆ ಭಂಗವನ್ನುಂಟು ಮಾಡಲು ಯಾರಿಗೂ ಧೈರ್ಯ ಸಾಲದು. ಆಗ ಲೋಕಕಲ್ಯಾಣ ಕಾರಕನಾದಂತಹ ಕಾಮನು ಅವರ ತಪೋಭಂಗ ಮಾಡಲೆತ್ನಿಸಿ, ಶಿವನ ಹಣೆಗಣ್ಣಿನಿಂದ ಸುಟ್ಟು ಬೂದಿಯಾಗುತ್ತಾನೆ. ಆದರೆ ಪಾರ್ವತಿಯಿಂದ ಮತ್ತೆ ಬದುಕಿಕೊಳ್ಳುತ್ತಾನೆ. ಅವನ ಸ್ಮರಣೆಗಾಗಿ 'ಕಾಮದಹನ'ವನ್ನು ಮಾಡುತ್ತಾರೆ.

ಒಟ್ಟಾರೆ ಒಂದು ದೈವಿಕ, ಇನ್ನೊಂದು ರಾಕ್ಷಸಿ – ಈ ಎರಡಕ್ಕೂ ನಿರಂತರವಾಗಿ ಸೃಷ್ಟಿ ಹುಟ್ಟಿದಾಗಿನಿಂದ ಘರ್ಷಣೆ ನಡೆಯುತ್ತಲೇ ಇದೆ. ತಾಮಸವನ್ನು ತುಳಿದು ಮಾನವನ ದೈವೀ ಗುಣಗಳು ಮೇಲೇಳಲೇಬೇಕು, ಆಗಲೇ ಲೋಕದಲ್ಲಿ ಶಾಂತಿ ನೆಲಸೀತು. ಇದು ಈ ಇಪ್ಪತ್ತನೆಯ ಶತಮಾನದಲ್ಲಿಯೂ ಇದೆ. ಮುಂದೆಯೂ ಇರುತ್ತದೆ. ಕಾಮನ ಹಬ್ಬದ ಆಚರಣೆ ಇದಕ್ಕೊಂದು ನಿದರ್ಶನ.

ಜಯಂತಿಗಳು

ಶ್ರೀರಾಮನವಮಿ

ಚೈತ್ರ ಶುದ್ಧ ನವಮಿಯೇ ರಾಮನವಮಿ. ಶ್ರೀಹರಿಯ ಏಳನೆಯ ಅವತಾರಿಯಾದ ಶ್ರೀರಾಮನು ಜನಿಸಿದ ದಿನವಿಂದು. ಇದೊಂದು ಉಪವಾಸ ವ್ರತ. ಭಕ್ಷ್ಯಭೋಜ್ಯಗಳ ಹಬ್ಬವಲ್ಲ. ಮಹಾ ಪುರುಷನೆನಿಸಿದ ಶ್ರೀರಾಮನ ಅರ್ಚನೆ, ರಾಮಾಯಣ ಪಾರಾಯಣಗಳು ಈ ದಿನ ನಡೆಯಬೇಕಾದುದು. ಇದನ್ನು ಆಚರಿಸುವದರಿಂದ ದೀರ್ಘಾಯುಷ್ಯ ಪ್ರಗತಿ ಆನಂದ ಮತ್ತು ಜಾಣತನ ಎಲ್ಲವೂ ದೊರೆಯುತ್ತವೆ. ಭ್ರಾತೃಪ್ರೀತಿ, ಪ್ರಜಾವಾತ್ಸಲ್ಯ, ಕರ್ತವ್ಯಪ್ರಜ್ಞೆ ಇವು ರಾಮನವಮಿಯ ಮಹತ್ವಸಂದೇಶಗಳು. ಇವುಗಳನ್ನು ನೈಜ ಜೀವನದಲ್ಲಿ ಆಚರಣೆಗೆ ತಂದುದಾದರೆ ಶ್ರೇಯಸ್ಸು ಲಭಿಸುತ್ತದೆ. ರಾಮನವಮಿಯಂದು ಅಲ್ಲಲ್ಲಿ ಸಂಗೀತ ಕಚೇರಿಗಳು ನಡೆಯುತ್ತವೆ.

ಕರ್ನಾಟಕ ಸಂಗೀತಕ್ಕೆ ಆಧಾರಸ್ತಂಭದಂತಿರುವ ತ್ಯಾಗರಾಜರು ರಾಮನ ಭಕ್ತರಾದುದರಿಂದ ರಾಮನವಮಿಗೂ ಸಂಗೀತಕ್ಕೂ ಅವಿ ಭಾಜ್ಯ ಸಂಬಂಧವಿರುವಂತೆ ಕಾಣುತ್ತದೆ. ರಾಮನ ಜೀವನದಿಂದ ಮಾನವ ಸಮಾಜಕ್ಕೆ ಬಹುಮೌಲ್ಯ ಪ್ರೇರಣೆ ಪ್ರಾಪ್ತವಾಗಿದೆ. ಭಾರತೀಯ ಸಾಹಿತ್ಯದಲ್ಲೆಲ್ಲಾ ಈತನ ಆದರ್ಶ ಚರಿತ್ರೆ ಮೂಡಿದೆ.

ಅಂದಿನ ಸಮಕಾಲೀನ ಸಮಾಜದ ಕಂಟಕಗಳನ್ನು ಶ್ರೀರಾಮ ಚಂದ್ರನು ನಿರ್ಮೂಲಮಾಡಿ ಹಿಮಾಲಯದಿಂದ ಹಿಡಿದು ಕನ್ಯಾ ಕುಮಾರಿಯ ವರೆಗೆ 'ರಾಮರಾಜ್ಯ'ವನ್ನು ಸ್ಥಾಪಿಸಿದನು. ಈ ರಾಜ್ಯದಲ್ಲಿ ದ್ವೇಷಭಾವನೆಗೆ ಎಡೆ ಇದ್ದಿಲ್ಲ. ಪ್ರತಿ ವ್ಯಕ್ತಿಗಳೂ ಪರಸ್ಪರ ಪ್ರೇಮ, ಸಹಕಾರದಿಂದ ಇದ್ದರು. ಒಟ್ಟಾರೆ ರಾಮ ನವಮಿಯೊಂದು ಬೆಳಗುವ ಜ್ಯೋತಿ ಇದ್ದಂತೆ. ಆ ಬೆಳಕು ಇಂದು ಮುಂದು ನಿತ್ಯನೂತನ ಚಿರಂತನ.

ಬಸವ ಜಯಂತಿ

ಶಿವನ ಪ್ರಿಯ ವಾಹನ ನಂದಿಯ ಅವತಾರವೇ ಭಕ್ತಿ ಭಾಂಡಾರಿ ಬಸವಣ್ಣನೆಂಬ ಪ್ರತೀತಿಯಿದೆ. ೧೨ನೆಯ ಶತಮಾನ ದಲ್ಲಿ ವೈಶಾಖ ಶುದ್ಧ ತೃತೀಯದಂದು ಈತ ಜನಿಸಿದ್ದನೆಂಬ ನಂಬಿಕೆ ಯಿದೆ. ಜಾತಿ-ವೈಷಮ್ಯ, ಧರ್ಮದ ಅಂಧಾನುಕರಣೆ, ವರ್ಣ ಕಲಹ, ತರ-ತಮ, ಮೇಲು ಕೀಳುಗಳನ್ನು ಪ್ರತಿಭಟಿಸಿ ವೀರಶೈವ ಧರ್ಮಕ್ಕೆ ಹೊಸ ಮೂರ್ತಸ್ವರೂಪ, ವಿಶಾಲರೂಪಕೊಟ್ಟು ಕ್ರಾಂತಿ ಯನ್ನು ಎಸಗಿದ ಬಸವಣ್ಣನವರ ಜಯಂತಿಯು ಆಚರಿಸಲ್ಪಡು

ನೆ. ಅಂದು ತೊಟ್ಟಿಲ ಪೂಜೆ, ಭಜನೆ, ಕೀರ್ತನೆ ವಚನಗಾನ
ತೆಯುತ್ತಿವೆ. ಸರ್ವಧರ್ಮ ಸಮನ್ವಯ ಮಾಡಿದ ಈ ಆದರ್ಶ
ರೂತಿಯು ವಿಶ್ವವಂದ್ಯನಾಗಿದ್ದಾನೆ.

ಹಾವೀರ ಜಯಂತಿ

ಸುಮಾರು ೨೫೦೦ ವರ್ಷಗಳ ಹಿಂದೆ ಬಿಹಾರ ಪ್ರಾಂತದ
್ರಿಯ ಕುಂಡ ಎಂಬ ನಗರದಲ್ಲಿ ಸಿದ್ಧಾರ್ಥರಾಜನ ಧರ್ಮಪತ್ನಿ
ಾದ ತ್ರಿಶಲಾದೇವಿಯ ಗರ್ಭದಲ್ಲಿ ಮಹಾವೀರನು ಚೈತ್ರಶುದ್ಧ
ನೆಯ ಸೋಮವಾರ ದಿವಸ ಜನ್ಮವೆತ್ತಿದನು. ಇವನು
ಟ್ಟಿದ ದಿನದಂದಿನಿಂದ ಮನೆಯಲ್ಲಿ ಐಶ್ವರ್ಯವು ಅಭಿವೃದ್ಧಿ
ಾಗತೊಡಗಿದ್ದರಿಂದ ಇವನಿಗೆ 'ವರ್ಧಮಾನ' ಎಂದು ನಾಮ
ಣ ಮಾಡಿದರು. ಮಹಾವೀರನು ೨೪ನೆಯ ತೀರ್ಥಂಕರನು.
ನು ಜೈನ ಸಂಪ್ರದಾಯದ ಹಬ್ಬ. ಜನತೆ ಹೀನಾವಸ್ಥೆಯಲ್ಲಿ
್ದಾಗ ಅವರಿಗೆ ಬೆಳಕನ್ನು ನೀಡಿದ ಮಹಾನುಭಾವನೀತ. ಅತುಲ
ಶ್ವರ್ಯವನ್ನು ತ್ಯಾಗಮಾಡಿ ಸನ್ಯಾಸ ದೀಕ್ಷೆಯನ್ನು ಪಡೆದು
ಪ್ರೋಬಲದಿಂದ ಅಂತಿಮ ಗುರಿಯನ್ನು ಸೇರಿದ ಮಹಾವೀರರು
ನರಾದರು, 'ಜಿನ' ಎಂದರೆ – ಸಂಸಾರವನ್ನು ಗೆದ್ದವರು.
ಂಸೆ, ಸತ್ಯ, ಸದ್ವರ್ತನೆ, ಸ್ವಪ್ರಯತ್ನ ಇವೆಲ್ಲವೂ ಮುಕ್ತಿ
ಾರ್ಗದ ಸೋಪಾನಗಳು ಎಂದು ಜನತೆಗೆ ತಿಳಿಹೇಳಿ ಜನತೆಯಲ್ಲಿ
ರ್ಮಕ್ರಾಂತಿಯನ್ನು ಮಾಡಿ ಕೇವಲ ಜೈನಧರ್ಮದವರಿಗಷ್ಟೆ
್ಲದೆ, ಇಡೀ ಮಾನವಕೋಟಿಗೆ ಮಹಾವೀರರು ನೀಡಿದ ಕಾಣಿಕೆ

ಅಮೂಲ್ಯವಾದುದು. ಇಂಥ ವಿಭೂತಿ ಪುರುಷನ ಸ್ಮರಣೆ ಕೇವಲ ಜೈನರಿಗಷ್ಟೇ ಸೀಮಿತವಾಗದೆ ಅನ್ಯ ಮತೀಯರೂ ಸರ್ವದಾ ಸ್ಮರಿಸುವಂತಾಗಿದೆ.

ಬುದ್ಧ ಜಯಂತಿ

ಆಶ್ವೀಜ ಶುದ್ಧ ದಶಮಿಯ ಶುಭ ಮುಹೂರ್ತವೇ ಬುದ್ಧನ ಜನನ. ಈತ ಬೌದ್ಧಧರ್ಮ ಪ್ರವರ್ತಕ. ಬುದ್ಧನನ್ನು ವಿಷ್ಣುವಿನ ಅವತಾರವೆಂದು ಕರೆಯುತ್ತಾರೆ.

ರಾಜಮನೆತನದಲ್ಲಿ ಜನಿಸಿದವನಾದರೂ ಅಲ್ಲಿಯ ವಿಲಾಸದ ವಿಪುಲ ಸಾಮಗ್ರಿಗಳಾದ ಕಾಂಚನ ಕಾಮಿನಿಯರ ಸಂಗವು ಈತನ ಮನಸ್ಸಿಗೆ ಮಾಯಾಜಾಲವೆಂದು ಗೋಚರಿಸಿ, ಸಂಸಾರತ್ಯಾಗಮಾಡಿ ಆರು ವರ್ಷ ಕಠಿಣ ತಪಸ್ಸನ್ನು ಬೋಧಿವೃಕ್ಷದ ಬುಡದಲ್ಲಿ ಕುಳಿತು ಧ್ಯಾನ ಮಾಡಿ ದಿವ್ಯಜ್ಯೋತಿಯನ್ನು ಕಂಡುಕೊಂಡು 'ಬುದ್ಧ' ನಾದನು. ಬುದ್ಧ ಎಂದರೆ – ಶ್ರೇಷ್ಠ ಜ್ಞಾನಿ. ಬುದ್ಧ ದೇವನ ಬುದ್ಧ, ಧರ್ಮ, ಸಂಘ ಇವು ಮೂರು ವೈದಿಕ ಧರ್ಮದ ತ್ರಿಮೂರ್ತಿಗಳ ಕಲ್ಪನೆಗೆ ತಳಹದಿಯಾಯಿತು. ಈತನಿಂದ ಪ್ರಪಂಚಕ್ಕೆ ಚಿರಶಾಂತಿಯ ಮುಖ್ಯಸಾಧನಗಳಾದ ಅಹಿಂಸೆ ಮತ್ತು ದಯೆಯ ಉಪದೇಶ ಲಭ್ಯವಾಯಿತು. ಈತನ ಉಪದೇಶ ಆಚರಣೆಗಳಿಗೆ ಆಕರ್ಷಿತರಾಗಿ ಅನೇಕರು ಅನುಯಾಯಿಗಳಾದರು. ಸಮಸ್ತ ಏಷಿಯಾ ಖಂಡದ ಧರ್ಮ ಸಾಮ್ರಾಟನೆನಿಸಿಕೊಂಡನು. ಈತನು ಅಲ್ಲಲ್ಲಿ ಬೌದ್ಧ ಸಂಘಾರಾಮಗಳನ್ನು ಸ್ಥಾಪಿಸಿ ಅವುಗಳ

ಮುಖಾಂತರ ಧರ್ಮ ಪ್ರಚಾರ ಮಾಡಿದನು. ಇಂತಹ ಮಹಾ ಪುರುಷನ ಜಯಂತಿಯು ರಾಷ್ಟ್ರೀಯ ಪರ್ವವೆಂದು ಗಣಿಸಲ್ಪಟ್ಟಿದೆ. ದುರ್ದೈವಕ್ಕೆ ಬುದ್ಧ ಭಾರತೀಯನಾಗಿದ್ದರೂ ಇಂದು ಅವನ ಧರ್ಮ ಅಷ್ಟಾಗಿ ಉಳಿದಿಲ್ಲ. ಆದರೆ ಪರನಾಡುಗಳಲ್ಲಿ ಇನ್ನೂ ಸಾಕಷ್ಟು ಪ್ರಚಾರದಲ್ಲಿದೆ.

ಕ್ರಿಸ್ತ ಜಯಂತಿ

ಡಿಸೆಂಬರ ತಿಂಗಳ ೨೫ನೆಯ ದಿನಾಂಕ ಏಸುಕ್ರಿಸ್ತನ ಜನನ ವಾಯಿತು. ಕ್ರೈಸ್ತರ ಹೊಸ ವರ್ಷದ ದಿನ. ಅಂದು ಚರ್ಚು ಗಳಲ್ಲಿ ಸಾಮೂಹಿಕವಾಗಿ ದೇವತಾ ಪ್ರಾರ್ಥನೆ ಮಾಡುತ್ತಾರೆ. ಬೈಬಲ್ ವಾಚನ ನಡೆಯುತ್ತಿದೆ. ಅಂದು ವಿಶೇಷ ಭೋಜನ ಸಮಾರಂಭ, ದಾನ ಧರ್ಮ, ಮನರಂಜನೆ ಕಾರ್ಯಕ್ರಮ ನಡೆ ಯುತ್ತಿವೆ. ಏಸುವು ಯಹೂದ್ಯರ ಮೂರ್ತಿಪೂಜೆ, ಅಸಭ್ಯ ಆಚಾರ, ಜಾತೀಯ ಮೇಲುಕೀಳು ಇವುಗಳನ್ನು ಖಂಡಿಸಿದರಿಂದ ಆತನನ್ನು ಅಲ್ಲಿಯ ದೊರೆ ಶಿಲುಬೆಗೇರಿಸಿದ. ಏಸು ಧರ್ಮಾ-ಧರ್ಮಗಳ ಒರೆಗಲ್ಲಾಗಿ ನಿಂತು ಸಾವನ್ನು ಸಂತೋಷದಿಂದ ಒಪ್ಪಿ ಕೊಂಡನು. ಶಿಲುಬೆಯ ಹಿಂಸೆಗೆ ಒಳಗಾದರೂ ಭಗವಂತನನ್ನು ಪ್ರಾರ್ಥಿಸುತ್ತ “ದೇವರೇ ಈ ಜನರನ್ನು ಕ್ಷಮಿಸು. ಅವರು ಮಾಡುವ ಕಾರ್ಯದ ತಿಳುವಳಿಕೆ ಅವರಿಗಿಲ್ಲ.” ಎಂದು ಬೇಡಿ ಕೊಂಡನು. ಏಸುವಿನಲ್ಲಿದ್ದ ಶಾಂತಿ, ಹೃದಯದ ಔದಾರ್ಯಗಳು ಅವನನ್ನು ದೇವಪುರುಷನನ್ನಾಗಿ ಮಾಡಿವೆ. ಅವನು ಮಾಡಿದ

ಕ್ರಾಂತಿಯು ಕಾಲದೇಶ ಮತಪಂಥಗಳನ್ನು ಮೀರಿ 'ಮಾನವ ಕುಲ ಒಂದು' ಎಂಬ ಭಾವನೆ ನೀಡಿದೆ. ಅಂಥ ಯುಗಪುರುಷನ ಸ್ಮರಣೆಯು ಎಲ್ಲರ ಹೃದಯಗಳಲ್ಲಿ ನಿರಂತರ ಉಳಿಯಲಿ ಹಾಗೂ ಅವನ ಮಾರ್ಗ ಸರ್ವರೂ ಅನುಸರಿಸಲಿ.

ಪೈಗಂಬರ ಜಯಂತಿ

ಮುಸಲ್ಮಾನ ಧರ್ಮಸ್ಥಾಪಕರೂ ಶಾಂತಿದೂತರೂ ಆದ ಮಹಮ್ಮದ ಪೈಗಂಬರರು ರಬೀ ಉಲ್ ಅವ್ವಲ್ ತಿಂಗಳ ೧೨ನೇ ದಿನಾಂಕ ಸೋಮವಾರ ಕ್ರಿ. ಶ. ೬ನೆಯ ಶತಮಾನದಲ್ಲಿ ಜನ್ಮತಾಳಿದರು. ಈ ಜಯಂತಿಯೇ ಈದ ಮಿ ಲಾದ್. 'ಮಿಲಾದ್' ಎಂದರೆ ಜನ್ಮ. 'ಈದ್' ಎಂದರೆ ಹಬ್ಬ. ಅಂದಿನ ಸಮಾಜದ ಹದಗೆಟ್ಟ ಅಶಾಂತಿಯ ನೆರೆಯಾಗಿದ್ದ ಅರಬ್ಬೀ ದೇಶದಲ್ಲಿ ಹೊಸ ಬೆಳಕನ್ನು ನೀಡುವ ಶಾಂತಿದೂತರಾಗಿ ಜನ್ಮತಾಳಿದರು. ಇವರ ಸತತ ಪರಿಶ್ರಮ, ಸತ್ಯ, ಪ್ರಾಮಾಣಿಕತೆಗಳಿಗೆ ಆಕರ್ಷಕಳಾದ ಶ್ರೀಮಂತ ಖದೀಜಳೊಂದಿಗೆ ಇವರ ವಿವಾಹ ನಡೆಯಿತು. ಜನರ ಅಂದಿನ ವಿಗ್ರಹಪೂಜೆ, ಬಲಿದಾನ, ಗೊಡ್ಡು ಆಚರಣೆ ಇವು ಪೈಗಂಬರರಿಗೆ ಸಹ್ಯವಾಗದೆ ಅದನ್ನು ವಿರೋಧಿಸಿ–'ದೇವರು ಒಬ್ಬನೆ' ಎಂದು ಹೇಳಿದರು. ಜನತೆಗೆ ಅದು ಹಿಡಿಸಲಿಲ್ಲ. ಇವರನ್ನು ಕೊಲ್ಲುವ ಪ್ರಯತ್ನ ಮಾಡಿದರು. ಅವರು ದೇವರ ಆಜ್ಞೆಯಂತೆ ಕ್ರಿ. ಶ. ೬೩೨ರಲ್ಲಿ ಮಕ್ಕಾದಿಂದ ಮದಿನಾಕ್ಕೆ ರಹಸ್ಯವಾಗಿ ಪ್ರಯಾಣ ಬೆಳೆ

ಸಿದರು. ಈ ದಿನದಿಂದಲೇ ಮುಸಲ್ಮಾನರು ಹಿಜರತ್ ಕಾಲ ಗಣನೆಯನ್ನು ಆರಂಭಿಸುತ್ತಾರೆ.

ಇವರು ಇಸ್ಲಾಮಧರ್ಮದಲ್ಲಿ ಸರ್ವಸಮಾನತೆ, ವಾತ್ಸಲ್ಯ, ದಾನ ಮತ್ತು ಪೂಜೆ ಇವುಗಳಿಗೆ ಪ್ರಾಧಾನ್ಯತೆಯನ್ನು ನೀಡಿದ್ದಾರೆ. ಎಲ್ಲ ಧರ್ಮಗಳಿಗೂ ಮಾನ್ಯತೆಯಿರುವದರಿಂದ ಸರ್ವಧರ್ಮಗಳ ಸಮಾನತೆಯನ್ನೇ ಬೋಧಿಸುವದರಿಂದ, ಯಾವರೀತಿ ಎಲ್ಲ ಹೊಳೆಗಳೂ, ನೀರಿನ ಝರಿಗಳೂ ಸಮುದ್ರವನ್ನೇ ಕೂಡುವಂತೆ–ಮುಸ್ಲಿಮ ಧರ್ಮವೂ ದೇವರೆಡೆಗೆ ಹೋಗುವ ಸಾಧನೆಯನ್ನೇ ಬೋಧಿಸುತ್ತದೆ. ಪೈಗಂಬರರು ಜನತೆಯನ್ನು ಕವಲುದಾರಿಯಿಂದ ರಾಜಮಾರ್ಗಕ್ಕೆ ತಂದ ದೇವದೂತರು. ಇಂಥ ಪುಣ್ಯಪುರುಷನ ಜಯಂತಿಯು ಪ್ರತಿಯೊಬ್ಬರಿಗೂ ಜೀವನದಲ್ಲಿ ನೆಮ್ಮದಿಯನ್ನು ಬಾಳಿನಲ್ಲಿ ಸರಸವನ್ನು ನೀಡುವಂತಹದು. ಹಿಂದೂ-ಮುಸ್ಲಿಮರು ಪೈಗಂಬರರ ಸಂದೇಶಗಳನ್ನು ಅನುಕರಣೆ ಮಾಡಿದ್ದಾದರೆ ಇಂದಿನ ಕಲುಷಿತ ವಾತಾವರಣ ತಿಳಿಯಾದೀತು.

ಗುರುನಾನಕ ಜಯಂತಿ

ಪಂಜಾಬದ ಸೇಖೂಪೂರಾ ಜಿಲ್ಲೆಯ ತಲವಂಡಿ ಗ್ರಾಮದಲ್ಲಿ ೧೪೬೯ರಲ್ಲಿ ಕ್ಷತ್ರಿಯ ಕುಲದಲ್ಲಿ ಕಲ್ಯಾಣಚಂದನ ಉದರದಲ್ಲಿ ಶೀಖಸಂಪ್ರದಾಯದ ಪ್ರವರ್ತಕನಾದ ಗುರುನಾನಕನ ಜನ್ಮವಾಯಿತು. ಅಕ್ಷಯ ತೃತೀಯ ದಿವಸ ಶೀಖರು ಗುರುನಾನಕ ಜಯಂತಿಯನ್ನು ಆಚರಿಸುವರು. ಇದಕ್ಕೆ ಗುರುಪುರಬವೆಂದು ಹೆಸರು.

ಗುರುನಾನಕರು ಶೀಖಧರ್ಮದ ಮೊದಲನೆಯ ಗುರುಗಳ 'ಸತ್ಯಶ್ರೀಯ ಕಾಲ'-ಎಂದರೆ ಸತ್ಯವೇ ಶಾಶ್ವತ-ಎಂಬುದು ಶೀಖ ನಮಸ್ಕಾರದ ನುಡಿ.

ಇವನು ತನ್ನ ಆಡುಭಾಷೆಯಲ್ಲಿ ಉಪದೇಶಪರ ಪದ್ಯಗಳನ ಮತ್ತು ದೋಹಾಗಳನ್ನು ರಚಿಸಿ ಹಿಂದೂ ಮುಸಲ್ಮಾನರ ಭೇ ಭಾವವನ್ನು ನಾಶಮಾಡಿ ಪ್ರೇಮ ಮತ್ತು ಸ್ನೇಹವನ್ನು ಉಪದೇ ಸಿದನು. ಗುರುನಾನಕನು ಸರ್ವಧರ್ಮ ಸಮನ್ವಯ ದೃಷ್ಟಿಯನ ಹೊಂದಿದ್ದನು ಮತ್ತು ಸ್ವಧರ್ಮದ ಪಾಲನೆಯನ್ನು ಮಾಡು ದ್ದರು. ಅವನು ಪರಧರ್ಮ ಸಹಿಷ್ಣುವೂ ಆಗಿದ್ದನು. ಈ ಅಸಂಖ್ಯ ಭಾರತೀಯ ಉಪಕಾರಿ ಸಂತರಲ್ಲಿ ಒಬ್ಬ. ಪ್ರೇಮ ಸೇವಾ ಮತ್ತು ದಯಾ ಇವೇ ಅವನ ಮಹಾಮಂತ್ರಗಳಾಗಿದ್ದವ

ಉತ್ಸವ ಕಾಲದಲ್ಲಿ ಅವರ ಪೂಜ್ಯಗ್ರಂಥವಾದ ಆದಿಗ್ರಂ ವನ್ನು ಪೂರ್ಣ ಪಠಣ ಮಾಡುವದು, ಬಳಿಕ ಸಶಸ್ತ್ರ ಶೀಖ ಸೈ ಸಹಿತವಾಗಿ ಅದನ್ನು ಮೆರೆಸುವದು ಈ ಜಯಂತಿಯ ವೈಶಿಷ್ಟ ವಾಗಿದೆ.

ಗಾಂಧಿ ಜಯಂತಿ

ಸತ್ಯವೇ ದೇವರು, ಅಹಿಂಸೆಯೇ ಸನ್ಮಾರ್ಗವೆಂದು ಅರಿತ ಆಚರಿಸಿ, ಬೋಧಿಸಿ ಸಮತಾವಾದದ ಮಾನವೀಯತೆಯ ಪುಣ್ಯ ಮುದ್ದೆಯಾದ ಮಹಾತ್ಮಾಜಿಯವರ ಜಯಂತಿಯು ಅಕ್ಟೋಬ

ರಡರಂದು ಆಚರಿಸಲಾಗುತ್ತಿದೆ. ೧೮೬೯ ಅಕ್ಟೋಬರ ೨, ಪೋರ ಬಂದರ ಅವರ ಜನ್ಮಸ್ಥಳ.

ಭಾರತದ ಸ್ವಾತಂತ್ರ್ಯ, ಹರಿಜನೋದ್ಧಾರ, ದೀನದಲಿತರ ಅಭ್ಯುದಯ, ಹಿಂದೂ-ಮುಸ್ಲೀಮರ ಐಕ್ಯತೆ, ಇವುಗಳ ಸಾಧನೆಯ ಮೂಲಕ ತಮ್ಮ ಅಂತಿಮಗುರಿಯನ್ನು ಸಾಧಿಸಿದರು. ಜೀವನವು ಸುಖಮಯವಾಗಲು ಅಹಿಂಸೆಯೊಂದೇ ಮಾರ್ಗ. ಅಹಿಂಸೆಯ ಪರ್ಯಾಯ ಪದವೇ ವಿಶ್ವಪ್ರೇಮ. ಅವರಲ್ಲಿಯ ಅಮೋಘ ವ್ಯಕ್ತಿತ್ವ ಕಂಡು ಎಲ್ಲರೂ 'ಮಹಾತ್ಮ'ನೆಂದು ಗೌರವಿಸಿದರು. ಇಂಥ ಪುಣ್ಯ ಪುರುಷನ ಪುಣ್ಯ ಸ್ಮರಣೆ ಚಿರಂತನ ಕಲ್ಯಾಣಪ್ರದ ವಾದುದು.

ರಾಷ್ಟ್ರೀಯ ಹಬ್ಬಗಳು

ಭಾರತದಲ್ಲಿ ಓಣಿಗೊಂದು ಹಬ್ಬ, ಊರಿಗೊಂದು ಹಬ್ಬ, ನಾಡಿಗೊಂದು ಹಬ್ಬ – ಹೀಗೆ ಎಲ್ಲೆಡೆಗೂ ವಿವಿಧ ರೀತಿಯಲ್ಲಿ ಒಂದೇ ಹಬ್ಬವನ್ನು ಆಚರಿಸಲಾಗುತ್ತಿದ್ದರೂ ಅವುಗಳಲ್ಲಿ ಏಕತೆಯಿದೆ. ಎಷ್ಟೋ ಹಬ್ಬಗಳು ಕೆಲವು ಭಾಗಕ್ಕೆ ಇಲ್ಲವೆ ಪ್ರಾದೇಶಿಕ ಮಟ್ಟಕ್ಕೆ ಸೀಮಿತವಾಗಿರುತ್ತವೆ. ಆದರೆ ರಾಷ್ಟ್ರೀಯ ಹಬ್ಬಗಳು ಆ ರೀತಿಯಲ್ಲಿ ಇಲ್ಲ. ಹಳ್ಳಿಯಿಂದ ದಿಲ್ಲಿಯ ವರೆಗೆ ಒಂದೇ ರೀತಿಯಲ್ಲಿ ಆಚರಿಸುವ ಪದ್ಧತಿಯಿದೆ. ಇವು ರಾಷ್ಟ್ರೀಯ ಭಾವನೆಯಿಂದ ಕೂಡಿರುವದರಿಂದ ರಾಷ್ಟ್ರೀಯ ಹಬ್ಬಗಳೆನಿಸಿಕೊಂಡಿವೆ. ಅಂಥವುಗಳಲ್ಲಿ ಭಾರತವು ಸ್ವತಂತ್ರವಾದ ದಿನ ೧೯೪೭ ಅಗಸ್ಟ ೧೫. ಗಣರಾಜ್ಯದಿನ ೨೬ನೆಯ ಜನೇವರಿ ೧೯೫೦. ಶಿಕ್ಷಕರ ದಿನಾಚರಣೆ ಸೆಪ್ಟಂಬರ ೫, ಮಕ್ಕಳ ದಿನಾಚರಣೆ ನವ್ಹಂಬರ ೧೪ ಇವು ಪ್ರಮುಖವಾದವುಗಳಾಗಿವೆ.

ಆಗಸ್ಟ ೧೫

ಬ್ರಿಟೀಶರ ಆಳ್ವಿಕೆಯಿಂದ ಭಾರತೀಯರು ಬಿಡುಗಡೆಹೊಂದಿ ಸ್ವಾತಂತ್ರ್ಯಸಿಕ್ಕ ಅವುರ ಆಗಸ್ಟ ೧೫ ರಾಷ್ಟ್ರೀಯ ಹಬ್ಬವೆನಿಸಿದೆ. ಭಾರತದ ಇತಿಹಾಸದಲ್ಲಿ ಈ ದಿನ ಹೊಸಯುಗದ ಪವಿತ್ರದಿನ. ಶ್ರೀ ಅರವಿಂದರು ಹೇಳುವಂತೆ ಅಖಿಲ ಮಾನವ ಕುಲದ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಭವಿಷ್ಯವನ್ನು ರೂಪಿಸುವ ಕಾರ್ಯದಲ್ಲಿ ಪ್ರಭಾವಶಾಲಿಯಾದ ಅವ್ಯಕ್ತ ಸಾಮರ್ಥ್ಯಗಳನ್ನೊಳಗೊಂಡ ಒಂದು ಶಕ್ತಿಸಂಪನ್ನ ರಾಷ್ಟ್ರದ ಪದಾರ್ಪಣವನ್ನು ಈ ದಿನ ಸೂಚಿಸುತ್ತದೆ.

ಅಂದು ಮಹತ್ವದ ಸ್ಥಳಗಳಲ್ಲಿ ರಾಷ್ಟ್ರಧ್ವಜವಂದನೆ ಮಾಡುವದು ದೇಶಸೇವೆಗೆ ಪ್ರತಿಜ್ಞೆ ಮಾಡುವುದೇ ಮೂಲ ಗುರಿಯಾಗಿದೆ.

ಜನೇವರಿ ೨೬

೧೯೫೦ನೆಯ ಜನೇವರಿ ೨೬ ರಿಂದ ಭಾರತವು ಸಂಪೂರ್ಣ ಗಣತಂತ್ರ ಪ್ರಜಾಪ್ರಭುತ್ವ ಪಡೆಯಿತು. ಇದರ ಸಂತೋಷ ಸೂಚಕವಾಗಿ ರಾಷ್ಟ್ರೀಯ ಮನೋಭಾವದಿಂದ ಎಲ್ಲೆಡೆ ಸಂಭ್ರಮಯುತ ಪೆರೇಡುಗಳು, ಉತ್ಸವಗಳು ಮತ್ತು ಭಾಷಣಗಳು ನಡೆಸುವದುಂಟು. ಇಡೀ ಭರತಖಂಡಕ್ಕೆ ಇದು ಮೆಚ್ಚಿಗೆಯ ಹಬ್ಬವಾಗಿದೆ. ಭಾರತದ ರಾಜಧಾನಿಯಾದ ದಿಲ್ಲಿಯಲ್ಲಂತೂ ಈ ದಿನ

ನಡೆಯುವ ಧ್ವಜವಂದನೆ, ಪೋಲಿಸ ಪೆರೇಡು, ರಾಷ್ಟ್ರಪತಿ ಹಾಗೂ ಪ್ರಧಾನ ಮಂತ್ರಿಗಳಿಂದ ಗೌರವ ಅಭಿವಂದನೆ ಸ್ವೀಕಾರ ಹಾಗೂ ಮನರಂಜನೆ ಕಾರ್ಯಕ್ರಮಗಳಲ್ಲಿ ಲಕ್ಷೋಪಲಕ್ಷ ಜನರು ಭಾಗ ವಹಿಸಿರುತ್ತಾರೆ. ಅಂದಿನ ದಿನ ಹಳ್ಳಿಯಿಂದ ದಿಲ್ಲಿಯ ವರೆಗೆ ದೇಶೋವಿಶಾಲವಾಗಿ ಈ ಆಚರಣೆ ನಡೆಯುತ್ತದೆ.

ಶಿಕ್ಷಕರ ದಿನಾಚರಣೆ

ಹಿಂದಿನ ರಾಷ್ಟ್ರಪತಿಗಳಾದ ಡಾ. ಸರ್ವಪಲ್ಲಿ ರಾಧಾ ಕೃಷ್ಣನ್‌ರ ಜನ್ಮದಿನವೇ ಶಿಕ್ಷಕರ ಜಯಂತಿಯಾಗಿದೆ. ಪ್ರತಿವರು ಷವೂ ಸೆಪ್ಟಂಬರ ೫ ರಂದು ಇದನ್ನು ಆಚರಿಸುತ್ತಾರೆ. 'ಗುರು ರೋಧಿಕಂ' ಗುರುವೇ ಎಲ್ಲರಕ್ಕಿಂತಲೂ ಅಧಿಕನು. ಶಿಕ್ಷಕನು ಸಮಾಜದ ಮೈಲುಗಲ್ಲು ಇದ್ದಂತೆ. ಏಕಲವ್ಯನು ಗುರುವಿನ ಮೂರ್ತಿ ಮಾಡಿಕೊಂಡೇ ವಿದ್ಯೆ ಕಲಿತ. ಎಲ್ಲರಿಗೂ ಸಮಾನ ಶಿಕ್ಷಣಕೊಟ್ಟು ಪ್ರತಿಯೊಬ್ಬರನ್ನೂ ಪ್ರಗತಿಯತ್ತ ಒಯ್ಯುವ ಸಾಮರ್ಥ್ಯ ಆತನ ಗುಂಟು. ಅಂಥ ಸಮಾಜದ ಒಂದು ಶಕ್ತಿಯ ಆಚರಣೆಯನ್ನು ಡಾ. ರಾಧಾಕೃಷ್ಣನ್‌ರು ಅರಿತು ಭಾರತದ ತುಂಬೆಲ್ಲಾ ಆಚರಿಸಲು ಹೇಳಿದರು. ಅವರ ಜಯಂತಿಯೇ ಶಿಕ್ಷಕರ ದಿನಾಚರಣೆಯಾಗಿದೆ. ಪಾಲಕ-ಶಿಕ್ಷಕ-ವಿದ್ಯಾರ್ಥಿ ಈ ಮೂವರ ಮುಪ್ಪುರಿಗೊಂಡಾಗಲೇ ಎಲ್ಲರಿಗೂ ಮಹತ್ವ ಬರುವದು. ಆದರೆ ಇಂದು ಕೆಲವು ಮಟ್ಟಿಗೆ ಪರಸ್ಪರ ತಿಳುವಳಿಕೆಯಿಲ್ಲದೆ ಶಿಕ್ಷಕನಿಗೆ ಸಮಾಜದಲ್ಲಿ ಯೋಗ್ಯ ಸ್ಥಾನಮಾನಗೌರವಗಳು ಸಿಗದೆ ಆರ್ಥಿಕ ಸ್ಥಿತಿಯಿಂದ ತೊಳಲಾಡು

ತ್ತಿದ್ದಾನೆ. ಗುರುವಿನ ಮಹತ್ವ ತಿಳಿದುಕೊಂಡು ಈಗ ನಡೆಯು ವದಕ್ಕಿಂತಲೂ ಇನ್ನೂ ವಿಶೇಷ ಜಾಗ್ರತೆಯಿಂದ ಆಚರಿಸಿದರೆ ಹೆಚ್ಚು ಸೂಕ್ತವಾಗುತ್ತದೆ.

ಮಕ್ಕಳ ದಿನಾಚರಣೆ

ಗಾಂಧೀ ಮಾರ್ಗದಲ್ಲಿ ನಡೆದು, ಭಾರತವನ್ನು ಪ್ರಗತಿಯ ಮಾರ್ಗದಲ್ಲಿ ಮುನ್ನಡೆಸಿದ ೧೮ ವರ್ಷಗಳ ವರೆಗೆ ಅವಿಶ್ರಾಂತ ವಾಗಿ ಭಾರತದ ಪ್ರಧಾನಮಂತ್ರಿಯಾಗಿ ಸರ್ವಾರ್ಪಣ ಭಾವದಿಂದ ದುಡಿದ ತ್ಯಾಗಮೂರ್ತಿ ಜವಾಹರಲಾಲ ನೆಹರೂರವರ ಜನ್ಮ ದಿನ ನವ್ಹಂಬರ ೧೪. ಅವರು ಮಕ್ಕಳ ಮೇಲೆ ಅಪಾರ ಪ್ರೀತಿಯನ್ನಿಟ್ಟು ಕೊಂಡುದರಿಂದ 'ಮಕ್ಕಳ ದಿನಾಚರಣೆ' ಎಂದು ಪ್ರತಿ ವರ್ಷವೂ ವೈಭವದಿಂದ ಆಚರಿಸಲಾಗುತ್ತಿದೆ. ಅಂದು ಮಕ್ಕಳಿಗೆ ವಿಶೇಷ ತಿಂಡಿತಿನಸು, ಆಟಪಾಟ ಮತ್ತು ಮನರಂಜನೆಯ ಕಾರ್ಯಕ್ರಮ ಗಳನ್ನು ಶಾಲೆಯಲ್ಲಿ ನಡೆಸಲಾಗುತ್ತಿದೆ.

ಪ್ರಾದೇಶಿಕ ಹಬ್ಬಗಳು

ಕರ್ನಾಟಕ : ನಮ್ಮ ಕನ್ನಡ ನಾಡಿನಲ್ಲಿ ಪಾರಂಪರ್ಯವಾಗಿ ಹನ್ನೆರಡು ಹುಣ್ಣಿಮೆ ಮತ್ತು ಹನ್ನೆರಡು ಅಮಾವಾಸ್ಯೆಗಳು ವಿಶಿಷ್ಟ ಹೆಸರುಗಳಿಂದ ಪ್ರಚಲಿತವಾಗಿವೆ.

ತಿಂಗಳು	ಹುಣ್ಣಿಮೆ	ಅಮಾವಾಸ್ಯೆ
ಚೈತ್ರ	ದವನದ	ಅಕ್ಷತದಿಗೆ
ವೈಶಾಖ	ಅಗಿ	ಬಾದಾಮಿ
ಜ್ಯೇಷ್ಠ	ಕಾರ	ಮಣ್ಣೆತ್ತಿನ
ಆಷಾಢ	ಕಡಲೆಗಡಬಿನ	ನಾಗರ
ಶ್ರಾವಣ	ನೂಲ	ಬೆನಕನ
ಭಾದ್ರಪದ	ಅನಂತ	ಮಹಾನವಮಿ
ಆಶ್ವೀಜ	ಸೀಗೆ	ದೀಪಾವಳಿ

ಕಾರ್ತೀಕ	ಗೌರಿ	ಛಟ್ಟಿ
ಮಾರ್ಗಶಿರ	ಹೊಸ್ತಿಲ	ಎಳ್ಳು
ಪುಷ್ಯ	ಬಂದ	ಅವರಾತ್ರಿ
ಮಾಘ	ಭಾರತ	ಶಿವರಾತ್ರಿ
ಫಾಲ್ಗುಣ	ಹೋಳಿ	ಯುಗಾದಿ

ಇವುಗಳು ಹೆಚ್ಚಾಗಿ ಉತ್ತರಕರ್ನಾಟಕದಲ್ಲಿ ಪ್ರಚಲಿತವಾಗಿ ಬಳಿಕೆಯಲ್ಲಿವೆ. ದಸರೆಯು ಮೈಸೂರಿನಲ್ಲಿ ಹೆಚ್ಚು ಪ್ರಸಿದ್ಧಿಯನ್ನು ಹೊಂದಿದೆ.

ಸಂಸ್ಕೃತದಿಂದ ಈ 'ದಸರಾ' ಶಬ್ದ ಬಂದಿದೆ. ಹತ್ತು ರಾತ್ರಿಯ ಈ ಹಬ್ಬವು ಕರ್ನಾಟಕದ ನಾಡಹಬ್ಬವು. ಈ ಪೂಜೆಯ ಆಚರಣೆ ಸುಮಾರು ೨ಸಾವಿರ ವರ್ಷಗಳಿಂದ ನಡೆದು ಬಂದಿದೆ. ಕ್ರಿ. ಶ. ೭–೮ ಶತಮಾನಗಳ ಬಾದಾಮಿ ಮತ್ತು ಮಹಾಬಲಿಪುರಂ ಶಿಲ್ಪಗಳಲ್ಲಿ ಮಹಿಷಾಸುರ ವಧೆಯ ಕಥೆಯು ಚಿತ್ರಿತವಾಗಿದೆ. ಆಲ್ಬರೂನಿಯ ಹೇಳಿಕೆಯಂತೆ ೧೧ನೆಯ ಶತಮಾನದಲ್ಲಿ ದುರ್ಗಾಷ್ಟಮಿ ಭರತ ಖಂಡದಲ್ಲೆಲ್ಲ ಆಚರಿಸಲ್ಪಡುತ್ತಿತ್ತು. ವಿದ್ಯಾರಣ್ಯರು ಶ್ರೀವಿದ್ಯಾ ಅಥವಾ ಭುವನೇಶ್ವರಿ ಉಪಾಸನೆಯಿಂದಲೇ ವಿಜಯ ನಗರ ಸಾಮ್ರಾಜ್ಯವನ್ನು ಸ್ಥಾಪಿಸಿದರೆಂದು ಉಲ್ಲೇಖವಿದೆ.

ಮೈಸೂರಿನಲ್ಲಿ ನಡೆಯುವ ದಸರಾ ಹಬ್ಬ ಮಹಾರಾಜರ ಅರಮನೆಯಿಂದಲೇ ಪ್ರಾರಂಭವಾಗುತ್ತದೆ. ಲಕ್ಷೋಪಲಕ್ಷ ದೀಪಗಳ ಬೆಳಕಿನ ಥಳಕು, ಶೃಂಗರಿಸಿದ, ಚಿನ್ನದ ಅಂಬಾರಿ ಕಟ್ಟಿದ ಆನೆಯ ಮೇಲೆ ಮಹಾರಾಜರು, ರಾಜಬೀದಿಗಳಲ್ಲಿ ವಿವಿಧ ವಾದ್ಯಗಳೊಂದಿಗೆ ಮೆರವಣಿಗೆ, ರಾಜರನ್ನು ಸುತ್ತುವರಿದ ಅಂಗರಕ್ಷಕರು,

ನೃತ್ಯ, ಯಕ್ಷಗಾನಗಳು, ಕೈಗಾರಿಕಾ ವಸ್ತುಪ್ರದರ್ಶನ, ವಿವಿಧಕಲಾ ಕೌಶಲಗಳು, ಇವೆಲ್ಲವೂ ನಾಡಿನ ಅನ್ಯದೇಶಗಳು, ಮತ್ತು ಪರದೇಶದ ಜನರನ್ನು ಆಕರ್ಷಿಸುವ ಪ್ರಮುಖ ಹಬ್ಬವಾಗಿದೆ. ಆದರೆ ಇಂದಿನ ಪ್ರಜಾಪ್ರಭುತ್ವದಲ್ಲಿ ರಾಜರು ಹೋಗಿ ವ್ಯಕ್ತಿ ಪೂಜೆಯ ಮಹತ್ವವು ಕಡಿಮೆಯಾಗಿ ಜಂಬೂಸವಾರಿ ನಿಂತಂತಾಗಿದೆ. ಆದರೆ ಕನ್ನಡಿಗರು ಮಾತ್ರ ಎಂದಿನಂತೆ ವಿಜೃಂಭಣೆಯಿಂದ ಈ ಹಬ್ಬವನ್ನು ಹತ್ತುದಿನಗಳ ವರೆಗೆ ಆಚರಿಸುತ್ತಾರೆ.

ಕೇರಳದ "ಓಣಂ"

ಕೇರಳದ ಪ್ರಮುಖವಾದ ಹಬ್ಬಗಳಲ್ಲಿ ಇದೊಂದು. ಈ ಹಬ್ಬವನ್ನು ಮಲೆಯಾಳಿಗಳು ನಾಲ್ಕುದಿನಗಳ ಪರ್ಯಂತ ಅತ್ಯಂತ ವಿಜೃಂಭಣೆಯಿಂದ ಆಚರಿಸುತ್ತಾರೆ. ಆ ನಾಲ್ಕು ದಿನಗಳಲ್ಲಿ ನಾವೆಗಳ ಸ್ಪರ್ಧೆ, ಹಾಡು, ನೃತ್ಯಗಳಿಂದ ತುಂಬಿರುತ್ತವೆ.

ಮಹಾಬಲಿಪುರಂ ರಾಜ್ಯವನ್ನು ಆಳುತ್ತಿದ್ದ ಮಹಾದಾನಿ ಮಹಾಬಲಿರಾಜನು ಪಾತಾಳಲೋಕದಿಂದ ವಾಮನನ ಅನುಗ್ರಹದ ಮೇರೆಗೆ ಒಂದು ದಿನದ ಮಟ್ಟಿಗೆ ಭೂಲೋಕಕ್ಕೆ ಅದೃಶ್ಯನಾಗಿ ಬರುವದನ್ನು ಅತ್ಯಂತ ಹರ್ಷದಿಂದ, ಉಲ್ಲಾಸದಿಂದ ಸ್ವಾಗತಿಸುವದೇ ಈ ಓಣಂ ಹಬ್ಬದ ವೈಶಿಷ್ಟ್ಯವಾಗಿದೆ.

ಪ್ರಥಮ ದಿನದಂದು ತಿರಚೂರಿನಲ್ಲಿ ಆನೆಗಳನ್ನು ಅಲಂಕರಿಸಿ ಮೆರವಣಿಗೆ ಮಾಡುತ್ತಾರೆ. ಶಿವರಾನೂರದಲ್ಲಿ ಮಹಾಕಾವ್ಯಗಳಲ್ಲಿಯ ಪ್ರೇಮಕಥೆ ಮತ್ತು ಗರತಿಯರ ಕಥೆಗಳಿಂದ ಕೂಡಿದ ಕಥ

ಕ್ಕಳಿ ನೃತ್ಯ ಆಡುತ್ತಾರೆ. ನಾಡಿನ ಜನರು ಇವುಗಳನ್ನು ವೀಕ್ಷಿಸಲು ಹೋಗುತ್ತಾರೆ.

ದ್ವಿತೀಯ ದಿನದಂದು ತಿರುವೊಣಂದಲ್ಲಿ ಮಹಾಬಲಿಯು ತನ್ನ ರಾಜಧಾನಿಗೆ ಬರುವನೆಂಬ ನಂಬಿಕೆಯಿಂದ ಪ್ರತಿಮನೆಯನ್ನೂ ದೀಪಾಲಂಕಾರದಿಂದ ಶೃಂಗರಿಸುತ್ತಾರೆ. ಮಧ್ಯರಾತ್ರಿಯಲ್ಲಿ ಯಾವ ಕೆಲಸವನ್ನೂ ಮಾಡಲಾಗುವದಿಲ್ಲ. ಜನರು ಅಂದು ತಮ್ಮ ಆಪ್ತೇಷ್ಟರೊಂದಿಗೆ ಭೇಟಿಕೊಡುತ್ತಾರೆ.

ತೃತೀಯ ದಿನದಂದು ಆರುಣಾಮುಲೈ ಮತ್ತು ಕೊಟ್ಟಾಯಮ್‌ಗಳಲ್ಲಿ 'ವಲ್ಲುಮಕರಿ' ಎಂದರೆ ನಾವೆಗಳ ಸ್ಪರ್ಧೆಯನ್ನು ಏರ್ಪಡಿಸುತ್ತಾರೆ. ನೂರಾರು ನಾವೆಗಳಲ್ಲಿ ಜನರು ಕುಳಿತು ಹುಟ್ಟು ಹಾಕುತ್ತಾರೆ. ಸಂಜೆಯು ಮುಂದೆ ಬಾಲಿಕೆಯರು ಚಪ್ಪಾಳೆಹಾಕುತ್ತ ನೃತ್ಯ ಮಾಡುತ್ತಾರೆ.

'ವೀಷು' ಮಲೆಯಾಳಿಗಳ ಹೊಸ ವರ್ಷದ ಹಬ್ಬವಾಗಿದೆ.

ಆಂಧ್ರ ಮತ್ತು ತಮಿಳುನಾಡು

ಮಕರ ಸಂಕ್ರಮಣಕ್ಕೆ ತಮಿಳಿನಲ್ಲಿ 'ಪೊಂಗಲ್' ಎನ್ನುವರು. ಇದು ಮೂರು ದಿನಗಳ ಹಬ್ಬ. ಮೊದಲ ದಿನ ಕುಟುಂಬದ ಹಬ್ಬವಾದರೆ, ಎರಡನೆಯ ದಿನ ಸೂರ್ಯದೇವನಿಗೆ ಅರ್ಪಿಸಲ್ಪಡುವ ಪೂಜೆಗೆ ಪ್ರಾಧಾನ್ಯ. ತೃತೀಯ ದಿನದಲ್ಲಿ ಗೋಪೂಜೆಗೆ ಆದ್ಯತೆ.

'ಪೊಂಗಲ್' ಎಂದರೆ ಅಕ್ಕಿಯ ಹಿಟ್ಟನ್ನು ಬೆಲ್ಲದೊಂದಿಗೆ ಹಾಲಿನಲ್ಲಿ ಬೇಯಿಸುವದು. ಸ್ತ್ರೀಯರು ಸೂರ್ಯದೇವನಿಗೆ ಇದನ್ನು ನೈವೇದ್ಯವಾಗಿ ಅರ್ಪಿಸುವರು. ಮೂರನೆಯ ದಿನದಂದು ಗೋಮಾತೆಗೆ ಪೊಂಗಲನ್ನು ಅರ್ಪಿಸುವರು. ಅಂದು ಗೋವು ಗಳನ್ನು ಶೃಂಗರಿಸಿ ಅವುಗಳಿಗೆ ಹಾರವನ್ನು ಹಾಕಿ ಮೆರವಣಿಗೆ ಮಾಡುವರು. ಬಣ್ಣದ ಪೊಂಗಲಿನಿಂದ ತಯಾರಿಸಿದ ಉಂಡೆ ಗಳನ್ನು ಮಾಡಿ ಬಯಲಿನಲ್ಲಿ ಪಕ್ಷಿಗಳಿಗೋಸ್ಕರ ಇಡುತ್ತಾರೆ. 'ಜಲ್ಲಿಕಟ್ಟು' ಎಂಬ ಗೂಳಿ ಕಾಳಗವನ್ನು ಮಧುರೆ, ತಿರುಚನಾಪಳ್ಳಿ, ಹಾಗೂ ತಂಜಾವೂರಿನಲ್ಲಿ ಏರ್ಪಡಿಸುತ್ತಾರೆ. ಸ್ಪರ್ಧೆಗೆ ನಿಲ್ಲಿಸ ಲ್ಪಟ್ಟ ಗೂಳಿಯ ಕೊಂಬಿಗೆ ಹಣದ ಗಂಟನ್ನು ಕಟ್ಟಿರುತ್ತಾರೆ. ನಿರಾಯುಧರಾದ ಹಳ್ಳಿಯ ತರುಣರು ಕೊಂಬಿನಲ್ಲಿ ಕಟ್ಟಿದ ಹಣದ ಗಂಟನ್ನು ಉಚ್ಚಿಕೊಳ್ಳಲು ಪ್ರಯತ್ನಿಸುತ್ತಾರೆ. ಅಂದು ರಾತ್ರಿ ಬಡವಬಲ್ಲಿದರೆಂಬ ಭೇದಭಾವವನ್ನು ಮರೆತು ಸಾಮೂಹಿಕ ಭೋಜನಕೂಟವನ್ನು ಏರ್ಪಡಿಸುತ್ತಾರೆ.

ಮಧುರೆಯ ನದಿಯ ಹಬ್ಬ, ಕಾವೇರಿನದಿಯ ಉತ್ಸವ, ಗೋಕುಲಾಷ್ಟಮಿ, ವೆಳಗಣ್ಣಿ ಮಹೋತ್ಸವ, ನವರಾತ್ರಿ, ದೀಪಾ ವಳಿ, ಕಾರ್ತಿಕೇಯ ಉತ್ಸವ, ವೈಕುಂಠ ಏಕಾದಶಿ, ಸೇಂಟ್ ಥಾಮ ಸನ ಜಯಂತಿ, ಬ್ರಹ್ಮೋತ್ಸವ ಮತ್ತು ತೆಪ್ಪೋತ್ಸವ ಮುಂತಾದ ಉತ್ಸವಗಳನ್ನು ಈ ನಾಡುಗಳಲ್ಲಿ ಆಚರಿಸುತ್ತಾರೆ.

ಮಹಾರಾಷ್ಟ್ರ

ಮಹಾರಾಷ್ಟ್ರದ ತುಂಬೆಲ್ಲ ಹತ್ತುದಿನಗಳ ವರೆಗೆ ಗಜವದನನಾದ ಗಣೇಶನ ಸುಂದರವಾದ ಮಣ್ಣಿನ ಮೂರ್ತಿಯನ್ನು ಚತುರ್ಥಿಯ ದಿನದಂದು ಅತ್ಯಂತ ಉತ್ಸಾಹದಿಂದ ಸ್ವಾಗತಿಸಿ ಮನೆಯಲ್ಲಿ ಪ್ರತಿಷ್ಠಾಪಿಸುತ್ತಾರೆ. ಕೊನೆಯದಿನ ಮೂರ್ತಿಯನ್ನು ಮೆರವಣಿಗೆಯೊಂದಿಗೆ ತೆಗೆದುಕೊಂಡು ಹೋಗಿ ಕೆರೆ, ಬಾವಿ ಇಲ್ಲವೆ ಹೊಳೆಗಳಲ್ಲಿ ವಿಸರ್ಜಿಸುತ್ತಾರೆ. ಸಾಮೂಹಿಕವಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ವೈಭವದಿಂದ ಆಚರಿಸುತ್ತಾರೆ. ಲೋಕಮಾನ್ಯ ಟಿಳಕರು ಗಣೇಶ ಚತುರ್ಥಿಗೊಂದು ವಿಶೇಷ ಮಹತ್ವ ನೀಡಿ, ಪ್ರಜಾಪ್ರಭುತ್ವದ ನಾಯಕನನ್ನಾಗಿ ಮಾಡಿ, ಈ ಹಬ್ಬದ ಮುಖಾಂತರವಾಗಿ ಸಾಂಘಿಕ ಜೀವನ, ಪರಸ್ಪರ ಬಂಧುತ್ವ ಮತ್ತು ರಾಷ್ಟ್ರಪ್ರೇಮವನ್ನು ಜನರಲ್ಲಿ ತಂದರು.

ಗುಜರಾಥ

ಇಲ್ಲಿ ಆಚರಿಸುವ ನವರಾತ್ರಿಯು ವಿಶೇಷವಾದದ್ದು. ಒಂಭತ್ತು ದಿನಗಳ ವರೆಗೆ ಪ್ರತಿ ದಿನ ಸಂಜೆ ಹೆಣ್ಣುಮಕ್ಕಳು 'ಗಬಾಣ' ನೃತ್ಯವನ್ನು ಮಾಡುತ್ತಾರೆ. ಒಂದು ಮಣ್ಣಿನ ಹಣತೆಯ ಸುತ್ತಲೂ ಚಪ್ಪಾಳೆ ಹಾಕುತ್ತ ತಾಳಬದ್ಧವಾಗಿ ಕುಣಿಯುವರು. ದೀಪಾವಳಿಯಾದ ಹತ್ತು ದಿನಗಳ ನಂತರ ಗಿರಿನಾರ ಪರ್ವತದಲ್ಲಿ ಸಾವಿರಾರು ಜೈನಯಾತ್ರಿಕರು ಒಟ್ಟುಗೂಡಿ ಪ್ರದಕ್ಷಿಣೆ ಹಾಕುವರು.

ರಾಜಸ್ಥಾನ

ಮಾರ್ಚ ಏಪ್ರಿಲ್ ತಿಂಗಳಿನಲ್ಲಿ 'ಗಂಗವರ' (Gangaur) ಹಬ್ಬವನ್ನು ವಸಂತಕಾಲದಲ್ಲಿ ಆಚರಿಸುತ್ತಾರೆ. ಅಧಿದೇವತೆ ಗೌರಿ. ಜಯಪುರದಲ್ಲಿಯ ಗೌರಿಯ ಮೂರ್ತಿಯನ್ನು ಮೆರವಣಿಗೆಯಲ್ಲಿ ಊರಸುತ್ತಲೆಲ್ಲಾ ಹಾಗೂ ಅರಮನೆಗಳಿಗೆ ಒಯ್ಯಲಾಗುತ್ತಿದೆ. ಹಳ್ಳಿಯಿಂದ ಸಾವಿರಾರು ಜನರು ಆಗಮಿಸಿ ಮೆರವಣಿಗೆಯಲ್ಲಿ ಪಾಲ್ಗೊಳ್ಳುತ್ತಾರೆ, ಉದಯಪುರದ ' ಪಿಚೋಲಾ ' ಸರೋವರ ದಲ್ಲಿ ನಾವೆಯ ಮೇಲೆ ಮೆರವಣಿಗೆ ತೆಗೆಯಲಾಗುತ್ತಿದೆ. ಇದು ಉದಯಪುರ ಹಬ್ಬದ ವೈಶಿಷ್ಟ್ಯವಾಗಿದೆ. ತರುಣಿಯರು ಅಮಾವಾಸ್ಯೆಯ ಮರುದಿನದಿಂದ ಗೌರಿಪೂಜೆಯನ್ನು ಪ್ರಾರಂಭಿಸುತ್ತಾರೆ. ತೇಜ್, ಪುಸ್ಕರ ಮೇಳ್, ಮೋಯಿನ್-ಉದ್-ದಿನ್, ಚಿಸ್ಟಿ ಉರಸ್ ಮುಂತಾದ ಹಬ್ಬ-ಉತ್ಸವಗಳನ್ನು ಈ ನಾಡಿನಲ್ಲಿ ಆಚರಿಸುತ್ತಾರೆ

ಕಾಶ್ಮೀರ

ಇಲ್ಲಿ ಫೆಬ್ರುವರಿ ಮಾರ್ಚ ತಿಂಗಳಿನಲ್ಲಿ ಶಿವರಾತ್ರಿ ಅಥವಾ ಹೀರಾತ್ ಹಬ್ಬವನ್ನು ೧೫ ದಿನಗಳ ವರೆಗೆ ಅತ್ಯಂತ ವೈಭವದಿಂದ ಆಚರಿಸುತ್ತಾರೆ. ೧೩ನೆಯ ದಿನಕ್ಕೆ ಹೀರಾತ್ ಆಚರಿಸುವರು. ಅಂದು ಉಪವಾಸ ಮಾಡುವರು. ಸಾಯಂಕಾಲ ಭೈರವ ಪೂಜೆ ಮಾಡುವರು. ಅಂದು ಅಕ್ರೂಟ ಹಣ್ಣು, ಕೇಶ್ ಮತ್ತು ಕಲ್ಲು ಸಕ್ಕರೆಯನ್ನು ಪ್ರತಿಯೊಬ್ಬರಿಗೂ ಹಂಚುವರು. ಮೇ ತಿಂಗಳಿನಲ್ಲಿ

'ರಾಜ್ಞೀಯ' ದೇವಿಯ ಜನ್ಮ ತಿಥಿ, ಶಹವಮ್ ದಾನನ ಉರಸ್, ಜನೇವರಿ ತಿಂಗಳಿನಲ್ಲಿ ಕಿಚರಿ ಅಮಾವಾಸ್ಯೆ ಮುಂತಾದವುಗಳನ್ನು ಪ್ರಮುಖ ಹಬ್ಬವಾಗಿ ಆಚರಿಸುತ್ತಾರೆ.

ಬಿಹಾರ

ಡಿಸೆಂಬರ ಜನೇವರಿ ತಿಂಗಳಿನಲ್ಲಿ 'ಗುರುಪೂರಬ್' ಎಂಬ ಹಬ್ಬವನ್ನು ನಾಡಿನಾದ್ಯಂತ ಆಚರಿಸುತ್ತಾರೆ. ಗುರುಗೋವಿಂದ ಸಿಂಗರ ಜನ್ಮಸ್ಥಳ ಪಾಟ್ನಾ. ಅವರೊಬ್ಬ ಮಹಾಪುರುಷರಾಗಿರುವದರಿಂದ ಅವರ ಸವಿನೆನಪಿಗಾಗಿ ಜನ್ಮದಿನದಂದು ಈ ಹಬ್ಬವನ್ನು ಆಚರಿಸುತ್ತಾರೆ.

ಓರಿಸಾ

ಜೂನ-ಜುಲೈ ತಿಂಗಳಿನಲ್ಲಿ ಪುರಿಯಲ್ಲಿ ದೊಡ್ಡ ಪ್ರಮಾಣದಲ್ಲಿ ರಥೋತ್ಸವ ಆಗುತ್ತದೆ. ಜಗನ್ನಾಥನು ವಿಷ್ಣುವಿನ ಅವತಾರವೆಂದು ನಂಬಲಾಗುತ್ತಿದೆ. ಅವನ ನೆನಪಿಗಾಗಿ ಈ ಹಬ್ಬವನ್ನು ಆಚರಿಸುತ್ತಾರೆ.

ಜಗನ್ನಾಥನು ಪುರಿಯಲ್ಲಿ ಹೇಗೆ ಪ್ರತಿಷ್ಠಾಪಿಸಲ್ಪಟ್ಟನೆಂಬುದಕ್ಕೆ ಒಂದು ಪೌರಾಣಿಕ ಕಥೆಯಿದೆ. ಇಂದ್ರದ್ಯುಮ್ನನೆಂಬ ರಾಜನಿಗೆ ಕೃಷ್ಣನ ಸ್ಮಾರಕ ಅವಶೇಷಗಳು ಸಿಗುತ್ತವೆ. ಅವುಗಳನ್ನು ವಿಷ್ಣುವಿನ ದೇವಾಲಯದಲ್ಲಿ ಪ್ರತಿಷ್ಠಾಪಿಸಬೇಕೆಂದು ಇಚ್ಛಿಸಿದನು.

ರಾಜನು ವಿಶ್ವಕರ್ಮನಿಗೆ ಸುಂದರವಾದ ಭವ್ಯವಾದ ಶಿಲ್ಪಕುಸುರಿನಿಂದ ಕೂಡಿದ ದೇವಾಲಯುವನ್ನು ನಿರ್ಮಿಸಲು ಕೇಳಿಕೊಳ್ಳುತ್ತಾನೆ. ಶಿಲ್ಪಿಯು ಒಂದು ಕರಾರುಹಾಕಿ ದೇವಾಲಯ ಕಟ್ಟಲು ಒಪ್ಪಿಕೊಳ್ಳುತ್ತಾನೆ. ಆ ಕರಾರು ಏನೆಂದರೆ ಈ ಇಡಿ ದೇವಾಲಯ ಕಟ್ಟಿಮುಗಿಯದ ಹೊರತು ಅದನ್ನು ನೋಡಕೂಡದು. ಕೆಲಸ ಪ್ರಾರಂಭವಾಗುತ್ತದೆ. ಅಲ್ಲದೆ ಹೊರಗಿನ ಭವ್ಯ ದೇವಾಲಯುವೂ ನಿರ್ಮಾಣವಾಗುತ್ತದೆ. ಆದರೆ ದಿನಕಳೆದಂತೆಲ್ಲಾ ರಾಜನಿಗೆ ಗುಡಿಯನ್ನು ನೋಡುವ ಆತುರ ಹೆಚ್ಚಾಗಿ ಶಿಲ್ಪಿಯು ಕೆಲಸದಲ್ಲಿರುವಾಗಲೆ ನೋಡಲು ಹೋಗುತ್ತಾನೆ. ಸಿಟ್ಟಿಗೆದ್ದ ವಿಶ್ವಕರ್ಮನು ಮೂರ್ತಿಯ ಕೈಕಾಲು ಪೂರ್ತಿಮಾಡದೆ ಬಿಟ್ಟು ಹೋಗುತ್ತಾನೆ. ಅರಸನು ಎಷ್ಟೆ ಕ್ಷಮೆ ಕೇಳಿದರೂ ಅವನು ಒಪ್ಪುವದಿಲ್ಲ. ಬ್ರಹ್ಮನು ಅಪೂರ್ಣವಾದ ಮೂರ್ತಿಗಳ ಮೈಯಲ್ಲಿ ಬಂದು ಅವುಗಳನ್ನು ಅತ್ಯಂತ ಸುಂದರವಾದ ಮೂರ್ತಿಗಳನ್ನಾಗಿ ಪರಿವರ್ತಿಸುತ್ತಾನೆ.

ಜಗನ್ನಾಥ, ತಮ್ಮ ಬಲಭದ್ರ, ತಂಗಿ ಸುಭದ್ರೆ ಇವರೆಲ್ಲರನ್ನೂ ೪೫ ಅಡಿ ಎತ್ತರದ ರಥದಲ್ಲಿ ಪ್ರತಿಷ್ಠಾಪಿಸಿ ಎಳೆಯುತ್ತಾರೆ. ಈ ಮೆರವಣಿಗೆಯು ಮೂರು ಕಿಲೋಮೀಟರದಲ್ಲಿರುವ 'ಗುಂಡಿಚಾಬಾರಿ' ಎಂಬಲ್ಲಿಗೆ ಹೋಗಿ ನಿಲ್ಲುತ್ತದೆ. ಏಳು ದಿನಗಳ ನಂತರ ಮತ್ತೆ ಆ ದೇವತೆಗಳನ್ನು ದೇವಾಲಯಕ್ಕೆ ಮರಳಿ ತೆಗೆದುಕೊಂಡು ಬರುತ್ತಾರೆ.

ಆಸಾಮ

ಆಕ್ಟೋಬರ ನವ್ಹಂಬರ ತಿಂಗಳಿನಲ್ಲಿ ಮಣಿಪುರಿ ನೃತ್ಯಗಾರ್ತಿಯರು ಮಣಿಪುರಿ ನಾಟ್ಯವಾಡುತ್ತ ಕೃಷ್ಣನ ಜೀವನವನ್ನು ನೃತ್ಯದಲ್ಲಿ ತೋರಿಸುತ್ತಾರೆ. ಈ ಹಬ್ಬಕ್ಕೆ 'ರಾಸಲೀಲೆ' ಎಂದು ಕರೆಯುತ್ತಾರೆ. ಜನೇವರಿಯಲ್ಲಿ 'ಬೋಗಲಿ ಬಿಹು' ಏಪ್ರಿಲ್ ಮೇ ತಿಂಗಳಿನಲ್ಲಿ 'ರಂಗೋಲಿ ಬಿಹು' ಇವುಗಳನ್ನು ವೈಭವದಿಂದ ಆಚರಿಸುತ್ತಾರೆ.

ಪಂಜಾಬ

ಈ ನಾಡಿನಲ್ಲಿ ಟಿಕ್ಕಾ (Tikka) ಹಬ್ಬಕ್ಕೆ ಪ್ರಾಧಾನ್ಯ ಹೆಚ್ಚು. ಬಹುಸಂಖ್ಯಾಕರು ಶೀಖರಿದ್ದು ಎಲ್ಲ ಶೀಖರ ಹಬ್ಬಗಳನ್ನೂ ಅತಿ ಉತ್ಸವದಿಂದ ಆಚರಿಸುತ್ತಾರೆ. ಟಿಕ್ಕಾ ಹಬ್ಬವನ್ನು ದೀಪಾವಳಿ ಮರುದಿವಸದಿಂದ ಆಚರಿಸುತ್ತಾರೆ. ಹೆಣ್ಣು ಮಕ್ಕಳು ಅಕ್ಕಿ ಮತ್ತು ಕುಂಕುಮದ ಗಂಧವನ್ನು ತಯಾರು ಮಾಡಿ ತಮ್ಮ ಅಣ್ಣತಮ್ಮಂದಿರ ಹಣೆಗೆ ಲೇಪಿಸುತ್ತಾರೆ. ಅದನ್ನು ಹಚ್ಚುವ ಉದ್ದೇಶ ಅವರಿಗೆ ಯಾವದೆ ತರದ ದುಷ್ಟ ಶಕ್ತಿಗಳ ಬಾಧೆಯಾಗ ಬಾರದೆಂದು. ಜನೇವರಿಯಲ್ಲಿ 'ಲೋರಿ' ಹಬ್ಬ, ಏಪ್ರಿಲ್ ಮೇ ದಲ್ಲಿ ವೈಶಾಖೀ (Bisaki) ಹಬ್ಬವನ್ನು ಆಚರಿಸುತ್ತಾರೆ.

ಹಿಮಾಚಲ ಪ್ರದೇಶ

'ಮಿಂಜರಮೇಳ್' ಇದು ಗಿರಿಯ ಹಬ್ಬವು. ರಾಜನ ಮೆರವಣಿಗೆಯನ್ನು ಅರಮನೆಯಿಂದ ಪರ್ವತದ ವರೆಗೆ ಒಯ್ಯುತ್ತಾರೆ. ಸದ್ಯ ಇದು ನಡೆಯುತ್ತಿಲ್ಲ. ರಾವಿ ನದಿಯಲ್ಲಿ ಮಿಂಜರ್ ಎಂದರೆ ಶಿಲ್ಕ ಮತ್ತು ಬೆಳ್ಳಿಯ ಸಾಮಾನುಗಳನ್ನು ಹಾಕುತ್ತಾರೆ. ಗಂಗಾ ಮಾತೆಯು ಕಾರ್ಪಣ್ಯ ದೂರ ಮಾಡುತ್ತಾಳೆ ಎಂಬ ನಂಬಿಕೆಯಿಂದ ನದಿಯಲ್ಲಿ ಹಾಕುತ್ತಾರೆ. ಪೂರ್ವಕಾಲದಲ್ಲಿ ದೇವಿಯ ಶಾಂತಿಗಾಗಿ ಭೋರ್ಗರೆಯುವ ನದಿಯಲ್ಲಿ ಕೋಣವನ್ನು ನುಗಿಸುತ್ತಿದ್ದರು. ಸದ್ಯಕ್ಕೆ ಈ ಪದ್ಧತಿ ನಿಂತಿದೆ. ಕುಲುಕೊಳ್ಳದಲ್ಲಿ ದಸರಾಹಬ್ಬ, ಜ್ವಾಲಾಮುಖಿ ಉತ್ಸವ ಇವು ಮಹತ್ವದ ಹಬ್ಬಗಳಾಗಿವೆ.

ಉತ್ತರ ಪ್ರದೇಶ

ಇಲ್ಲಿ ಹೋಳಿ ಹುಣ್ಣಿಮೆಯನ್ನು ಅತ್ಯಂತ ವೈಭವದಿಂದ ಆಚರಿಸುತ್ತಾರೆ. ಹಿಂದುಗಳ ಎಲ್ಲ ಹಬ್ಬಗಳಲ್ಲಿ ಹೋಳಿ ಹಬ್ಬವನ್ನು ಸ್ವಚ್ಛಂದವಾಗಿ ತನ್ನ ಸುಪ್ತ ಬಯಕೆಗಳನ್ನು ಈಡೇರಿಸಿಕೊಳ್ಳಲು ಮಾನವ ಈ ಹಬ್ಬದ ಆಯ್ಕೆಯನ್ನು ಮಾಡಿರಬೇಕು.

ಮಥುರಾದಿಂದ ೩೦ ಮೈಲು ದೂರವಿರುವ ಬರಸನಾ ಮತ್ತು ನಂದಗಾಂವ ಊರುಗಳಲ್ಲಿ ಈ ಹಬ್ಬವು ಒಳ್ಳೆ ವಿಜೃಂಭಣೆಯಿಂದ ನಡೆಯುತ್ತದೆ. ಈ ಎರಡು ಗ್ರಾಮಗಳು ರಾಧಾ ಮುರಲಿಯರ ವಾಸಸ್ಥಾನವೆಂದು ಪ್ರಸಿದ್ಧವಾಗಿದೆ. ಬರಸನಾ

ಗ್ರಾಮದ ಹೆಣ್ಣುಮಕ್ಕಳು ನಂದಗಾಂವ ಗ್ರಾಮದ ಗಂಡಸರೊಡನೆ ಬಣ್ಣದ ನೀರನ್ನು ಸಿಂಪಡಿಸುತ್ತಾರೆ. ಹೆಂಗಸರು ಗಂಡಸರಿಗೆ ಚಬಕ ದಿಂದ ಹೊಡೆಯುತ್ತಾರೆ. ಗಂಡಸರು ಚರ್ಮದ ಹೊದಿಕೆ ಹೊತ್ತು ಕೊಂಡು ಅವರ ಹೊಡೆತವನ್ನು ಸಹಿಸುತ್ತಾರೆ. ಎರಡನೆಯ ದಿವಸ ನಂದಗಾಂವ ಗ್ರಾಮದ ಹೆಂಗಸರು ಬರಸನಾ ಗ್ರಾಮದ ಗಂಡಸರೊಡನೆ ಅದೇ ರೀತಿಯಲ್ಲಿ ಆಟವಾಡುತ್ತಾರೆ. ಈ ರೀತಿಯ ಅಣಕು ಯುದ್ಧವು ಎರಡು ದಿವಸ ನಡೆಯುತ್ತದೆ. ಅದರಲ್ಲಿ ಆದ ಗಾಯುಗಳನ್ನು ಸಹಿಸಿಕೊಳ್ಳುತ್ತಾರೆ. ಇಂಥ ಗಾಯುಗಳು ಶುಭ ವೆಂದು ಗಣಿಸುತ್ತಾರೆ.

ಮಾರ್ಚ್ ಏಪ್ರಿಲ್ ತಿಂಗಳಿನಲ್ಲಿ ಮಥುರೆಯಲ್ಲಿ ರಥೋ ತ್ಸವ, ರಾಮನವಮಿಯನ್ನು ಆಚರಿಸುತ್ತಾರೆ. ವನಮಹೋತ್ಸವ, ಕಂಸಕಾ ಮೇಳ್ ಇವು ನಾಡಿನ ಪ್ರಮುಖವಾದ ಹಬ್ಬಹರಿದಿನಗಳು.

ಬಂಗಾಲ

ಬಂಗಾಲ ನಾಡಿನಲ್ಲಿ ದುರ್ಗಾ ಪೂಜೆಗೆ ಪ್ರಾಧಾನ್ಯ ಬಹಳ. ವೇದಕಾಲದಿಂದಲೂ ದೇವಿಯನ್ನು ಪೂಜಿಸುತ್ತ ಬಂದಿದ್ದಾರೆ. ೧) ಉಷಾ ೨) ಪೃಥ್ವಿ ೩) ವಾಕ್ ೪) ರಾತ್ರಿದೇವಿ-ಇವು ನಾಲ್ಕು ದೇವಿಯ ರೂಪಗಳು. ದುರ್ಗೆಗೆ ಜಗನ್ಮಾತೆಯೆಂದು ಹೆಸರು. ಅವಳಲ್ಲಿ ಕಾಯುವ-ಕೊಲ್ಲುವ ಎರಡೂ ಶಕ್ತಿಗಳುಂಟು. ಬಂಗಾಲದಲ್ಲಿ ದೇವಿಯ ಬಗೆಗೆ ಬಹಳಷ್ಟು ನಂಬಿಕೆಯಿದೆ. ಯಾಕೆಂದರೆ ರಾಮನು ರಾವಣನನ್ನು ಕೊಲ್ಲುವದಕ್ಕಾಗಿ ದೇವಿ

ಯನ್ನು ಪೂಜಿಸಿದನಂತೆ. ಲಲಿತ ಸಹಸ್ರನಾಮದಲ್ಲಿ ಆಚಾರ್ಯ ಭಾಸ್ಕರನು ಹೇಳಿದಂತೆ ಹತ್ತು ಮುಖಗಳುಳ್ಳ ದೇವಿಯ ರೂಪದ ಪರಿಚಯವನ್ನು ಭಾರತದ ತುಂಬೆಲ್ಲಾ ಪ್ರಚಾರ ಮಾಡಿದನು. ಬಾಲ, ಲಲಿತ, ಅನ್ನಪೂರ್ಣಾ, ಅಶ್ವಾರೂಢ, ರಾಜಮಾತಂಗಿ, ವಾಗ್ವಾದಿನಿ, ವರಾಹಿ, ಪಾರಾ, ಭುವನೇಶ್ವರಿ ಮತ್ತು ಚಂಡಿ ಇವೇ ಅವಳ ಹತ್ತು ರೂಪಗಳು.

ಒಂಭತ್ತು ದಿನ ಪೂಜೆ ನಡೆಯುವದು. ಬ್ರಹ್ಮಚಾರಿಗಳು ಎಂಟನೆ ದಿನ ಉಪವಾಸವ್ರತ ಕೈಕೊಳ್ಳುವರು. ಒಂಭತ್ತನೆಯ ದಿನ ಸರಸ್ವತಿ ಪೂಜೆಗೆ ಸೀಮಿತವಾಗಿದೆ. ಹತ್ತನೆಯ ದಿನ ಅಪರಾಜಿತೆಯ ರೂಪವನ್ನು ಪೂಜಿಸುವದುಂಟು.

ದುರ್ಗಾ ದುರ್ಗೇತಿ ದುರ್ಗೇತಿ
ದುರ್ಗಾನಾಮ ಪರಂ ಮನುಂ
ಯೋ ಜಪೇತ ಸತತಂ ಚಂಡಿ
ಜೀವನ್ಮುಕ್ತಃ ಸಮಾನವಃ

ದುರ್ಗಾ ದುರ್ಗಾ ದುರ್ಗಾ ಎಂಬ ಮಂತ್ರವನ್ನು ಆಗೀಗ ಉಚ್ಚರಿಸುವವನಿಗೆ ಇಹಲೋಕದಲ್ಲಿ ವಿಮುಕ್ತಿ ಖಂಡಿತ.

ಉಪಸಂಹಾರ

ಪ್ರಾಚೀನ ಕಾಲದಿಂದಲೂ ಸಾಂಪ್ರದಾಯಕವಾಗಿ ಬರುವ ಆಚರಣೆಯ ನೀತಿ ನಿಯಮಗಳು ಪೂಜೆ ವ್ರತಗಳು, ಊಟ ಉಡಿಗೆಗಳು, ಜಾತ್ರೆ ಉತ್ಸವಗಳು, ಜಯಂತಿ ಪುಣ್ಯತಿಥಿಗಳು, ಇವೆಲ್ಲವು ವಾಸ್ತವಕ್ಕಿಂತ ಹಲವು ಸಲ ಅಸಹಜವಾಗಿ ಕಂಡರೂ ಅವುಗಳಲ್ಲಿ ಭಾರತೀಯ ಸಂಸ್ಕೃತಿ, ಧಾರ್ಮಿಕ ನೆಲೆಗಟ್ಟು, ದೇವದರ್ಶನ, ಮನತೃಪ್ತಿ, ಸಾಮಾಜಿಕ ಜೀವನದಲ್ಲಿಯ ಬದಲಾವಣೆ, ಸಂಘಶಕ್ತಿ, ಇಹದಿಂದ ಪರಕ್ಕೆ ಹೋಗುವ ಮಾರ್ಗ–ಇವುಗಳ ಸೂಕ್ಷ್ಮ ದರ್ಶನ ಇದೆ.

ಇಂದು ಎಷ್ಟೋ ಹಬ್ಬ ಹರಿದಿನಗಳು ಕೇವಲ ಮೂಢ ನಂಬಿಕೆಯಿಂದ ಮಾತ್ರ ನಡೆದು ಬಂದಿವೆ ಎಂದು ಕೆಲವರು ಅರ್ಥ ಮಾಡಿಕೊಂಡು ತನ್ನತನವನ್ನು ಕಳೆದುಕೊಂಡಿದ್ದಾರೆನ್ನಬಹುದು.

ಆದರೆ ಅದನ್ನು ಒಳಹೊಕ್ಕು ನೋಡಿದಾಗ ಅದರ ಅಂತರಾರ್ಥ ಮುಖ್ಯವಾಗಿರುತ್ತದೆಯೇ ಹೊರತು ಅಂದು ಮಾಡಿದ ಹೋಳಿಗೆ ಕಡಬುಗಳಲ್ಲ,

ರಾಷ್ಟ್ರೀಯ ಹಬ್ಬಗಳು, ಜಯಂತಿ ಉತ್ಸವಗಳು ಮತ್ತು ಧಾರ್ಮಿಕ ಹಬ್ಬಗಳನ್ನು ವಿಶೇಷ ಗೌರವ ನಂಬಿಕೆ ಮತ್ತು ಶ್ರದ್ಧೆಯಿಂದ ಆಚರಿಸಬೇಕು. ಜಾತಿ-ಮತ-ಪಂಥ ಪ್ರಾಂತಗಳ ಸಂಕುಚಿತ ಭಾವನೆಗಳನ್ನು ಇಟ್ಟುಕೊಳ್ಳದೆ ಅವುಗಳನ್ನು ಆಚರಿಸಿ ನಮ್ಮ ನಿತ್ಯ ಜೀವನದಲ್ಲಿ ಅನುಷ್ಠಾನಕ್ಕೆ ತರುವ ವಿಶಾಲ ದೃಷ್ಟಿಯನ್ನು ಹೊಂದಬೇಕು.

ಹಬ್ಬಗಳು ವಿಘ್ನಕಾರಕ. ಹಣದ ದುರುಪಯೋಗ ಮತ್ತು ಅಶಾಂತಿ ಎಂದು ಅನ್ನಕೂಡದು. ಹಬ್ಬಗಳನ್ನು ಆಚರಿಸಲೇಬೇಕು. ಅವು ನಿಜವಾದ ಆನಂದ ಕೊಡುವದಕ್ಕೆ ತಕ್ಕಂತೆ ಆಚರಣೆಯ ರೀತಿಯುನ್ನು ಯಥಾಶಕ್ತಿ ಮಾರ್ಪಾಡು ಮಾಡಿಕೊಳ್ಳುವದು ಅಗತ್ಯ. ಅತಿಯಾಗಿ ಯಾವದಕ್ಕೂ ಹಚ್ಚಿಕೊಂಡು ಹೋಗಬಾರದು. ಹೆಚ್ಚು ಶ್ರಮವಹಿಸದೆ ಮನೆಯನ್ನು, ದೇವಮಂದಿರವನ್ನು ಅಲಂಕರಿಸಬೇಕು. ದೇವರಧ್ಯಾನ, ಮೌನಗಳಿಗೆ ಹೆಚ್ಚು ವೇಳೆಯನ್ನು ಕಳೆಯಬೇಕು. ಹಬ್ಬಕ್ಕಾಗಿ ತಯಾರಿಸುವ ಅಡಿಗೆಗಳು ಮಿತಿ ಇರಬೇಕು. ಕೇವಲ ಲಕ್ಷಣಕ್ಕಾಗಿ ಬಹಳಷ್ಟು ರೀತಿಯ ಅಡಿಗೆ ಮಾಡಿ ಹಾಳು ಮಾಡಬಾರದು. ವೇಳೆಗೆ ಸರಿಯಾಗಿ ಊಟ ಮಾಡಿ ಕೆಲವು ಹೊತ್ತಾದರೂ ಆರಾಮದಿಂದ ವಿರಮಿಸಬೇಕು. ಅಂದರೆ ಮಾತ್ರ ಅಂದಿನ ಹಬ್ಬವು ಮನೆಯ ಮಂದಿಗೆಲ್ಲ 'ಹಬ್ಬ' ವಾಗುತ್ತದೆ.

ಹಣವಿದ್ದರೆ ಹಬ್ಬವಾಗುತ್ತದೆ. ಅವಶ್ಯವಿದ್ದ ಹಬ್ಬಗಳನ್ನು ಆಚರಿಸಿ ಅನಾವಶ್ಯಕ ಹಣ ಹಾಳು ಮಾಡದೆ ಜನರಲ್ಲಿ ತಮ್ಮ ಸಂಸ್ಕೃತಿಯ ಹಿರಿಮೆ ಗರಿಮೆಗಳ ಅರಿವು; ದೇವರಲ್ಲಿ ಅಪಾರಶ್ರದ್ಧೆ ಇಟ್ಟುಕೊಂಡು ಅರಿತು ಆಚರಿಸುವದು ಒಳ್ಳೆಯದು. ಮಿತಿಮೀರಿ ಹಣ ವ್ಯಯಿಸಿ ಹಬ್ಬವನ್ನು ಆಚರಿಸಿ ಕೊರಗುವದು ಬೇಡ. ಮುಂದಿನ ಹಬ್ಬ ಬರುವವರೆಗೂ ನಡೆದ ಹಬ್ಬದ ಹಿತ ನಮ್ಮ ನೆನಪಿನಲ್ಲಿರಬೇಕು. ಈ ಉದ್ದೇಶ ಸಾಧನೆಯಾಗುವದಾದರೆ ಹಬ್ಬಗಳು ಹೊರೆಯಲ್ಲ.

ಇಂದು ವಿಜ್ಞಾನಕಾಲ. ದ್ವಾಪರಯುಗದ ರಾಮಾಯಣ, ಮಹಾಭಾರತ, ಭಗವದ್ಗೀತೆ, ವೇದ ಉಪನಿಷತ್ತುಗಳನ್ನು ನಂಬುವ ಕಾಲವಲ್ಲ. ಅನೇಕರು ಅವು ತಮ್ಮ ಬುದ್ಧಿಗೆ ನಿಲುಕದಾದಾಗ ಅವುಗಳನ್ನು ತಿರಸ್ಕರಿಸಿ ತಮ್ಮ ಮಾನವೀಯತೆಯ ಕಲ್ಪನೆಯನ್ನು ಸಹ ಮಾಡದೆ ಕ್ಷಣಿಕ ಸೌಖ್ಯಕ್ಕಾಗಿ ಅನ್ಯರು ಕುಣಿದಂತೆ ತಾವೂ ಕುಣಿಯಲಿಕ್ಕೆ ಹೋಗಿ ಅಪಹಾಸ್ಯಕ್ಕೆ ಈಡಾಗುತ್ತಾರೆ. ಈ ಯುಗವು ಹಳೆಯ ಹೊಸದರ ಸಂಕ್ರಮಣ ಕಾಲವು. ಎಲ್ಲವನ್ನು ಒರೆಗಲ್ಲಿಗೆ ಹಚ್ಚಿ ಅವುಗಳಲ್ಲಿ ಶುದ್ಧವಾಗಿರುವದನ್ನು ಮಾತ್ರ ಸ್ವೀಕರಿಸುವದು ಯೋಗ್ಯವಾದುದು. 'ನಮ್ಮ ಹಿರಿಯ ಸತ್‌ಸಂಪ್ರದಾಯದಿಂದ ಬಂದಿರುವ ಹಬ್ಬಹುಣ್ಣಿವೆ, ವ್ರತ ನಿಯಮಗಳು ಅತಿಶಯೋಕ್ತಿಯಾಗಿರದೆ ನೈಜವೆಂದು ನೆರೆನಂಬಿ ಜನ್ಮವನ್ನು ಸಾರ್ಥಕಮಾಡಿಕೊಳ್ಳಬೇಕು.'

ಇಂದು ಪ್ರಚಾರದ ಚಮತ್ಕಾರಿಕ ಯುಗ. ಧಾರ್ಮಿಕತೆಯು ಹಿಂದೋಡಹತ್ತಿದೆ. ಪ್ರಾಚೀನ ಕಥಾ ಸಾಹಿತ್ಯದ ಮೇಲೆ ಜನರ

ಶ್ರದ್ಧೆಯು ನಶಿಸಿ ಹೋಗ ಹತ್ತಿದೆ. ಆದರೆ ಭೌತಿಕ ವಿಜ್ಞಾನದ ಚಮತ್ಕಾರದಲ್ಲಿ ನಾವು ದಿನೇ ದಿನೇ ಪ್ರಗತಿಯನ್ನು ಸಾಧಿಸುತ್ತ ಮುನ್ನಡೆಯುತ್ತಿದ್ದೇವೆ. ಇತ್ತೀಚೆಗೆ ಅಮೆರಿಕೆಯವರು ಚಂದ್ರನ ವರೆಗೂ ಪದಾರ್ಪಣೆ ಮಾಡಿ ಬಂದರು. ದೇಶದ ಪ್ರಜ್ಞಾವಂತರು, ಧಾರ್ಮಿಕ ಗುರುಗಳು ಈ ದಿಶೆಯಲ್ಲಿ ಗುರುಗಾಂಭೀರ್ಯದಿಂದ ತಮ್ಮ ವಿಚಾರವನ್ನು ವ್ಯಕ್ತ ಮಾಡುತ್ತ ಬಂದಿದ್ದಾರೆ. ಭೌತಿಕ ವಿಕಾಸವು ಮನುಷ್ಯನ ಪ್ರಕೃತಿ ವಿಜಯವೆಂದು ಘೋಷಿಸಬಹುದು. ಆದರೆ ಮಾನವತೆಯ ರಕ್ಷಕನೆಂದು ಹೇಳಲು ಬಾರದು. ಒಂದು ವೇಳೆ ಸಂಸ್ಕೃತಿ ಮತ್ತು ಸಭ್ಯತೆಯು ವಿಜ್ಞಾನದಿಂದ ತುಂಡರಿಸಲ್ಪಟ್ಟರೆ ಮಾನವನಲ್ಲಿರುವ ಸದ್ಗುಣಗಳ ನಾಶ ಖಂಡಿತ. ಇವುಗಳ ಅಭಾವದಿಂದ ಸಮಾಜವು ನಾಶವಾಗುತ್ತದೆ. ಇದಕ್ಕೆ ಇತಿಹಾಸವೇ ಸಾಕ್ಷಿ. ಭೌತಿಕ ವಿಕಾಸದೊಂದಿಗೆ ಉಚ್ಚ ಮಾನವೀಯ ಗುಣಗಳನ್ನು ಸಮರಸ ಮಾಡಿಕೊಂಡು ನಡೆದದ್ದಾದರೆ ಮಾನವತೆ ಚಿರಸ್ಥಾಯಿಯಾಗಿ ಉಳಿಯಬಲ್ಲದು. ನಮ್ಮ ಹಬ್ಬಗಳೂ ಇವನ್ನೆ ನಿರ್ದೇಶಿಸುತ್ತವೆ. ಸಮಾಜವು ಇವುಗಳಿಂದ ಪ್ರೇರಣೆಯನ್ನು ತೆಗೆದುಕೊಂಡು ಮುಂದಡಿ ಇಡಬೇಕು. ಜನರಲ್ಲಿ ಇವುಗಳ ಆಚರಣೆಯಿಂದ ಸದ್ಭಾವನೆ ಬಂದೇ ಬರುತ್ತದೆ. ಈ ದಿಶೆಯಲ್ಲಿ ಒಂದು ವೇಳೆ ನನ್ನ ಈ ಪಂಕ್ತಿಗಳಿಂದ ಜನತೆಗೆ ಲಾಭವಾದರೆ ನನ್ನ ಅಲ್ಪ ಪ್ರಯಾಸದ ಅಳಿಲುಸೇವೆ ಸಫಲವಾಯಿತೆಂದು ಭಾವಿಸುತ್ತೇನೆ.

ಗ್ರಂಥಋಣ

೧) ಸಚಿತ್ರ ಹಿಂದು ಹಬ್ಬಗಳು : ಪಂ. ಗುರುದೇವ ಶಿವಾಚಾರ್ಯ ಸ್ವಾಮಿಗಳು, ನವಿಲುಗುಂದ.

೨) ಭಾರತೀಯರ ಹಬ್ಬಗಳು : ಪಂ. ಚೆ. ಎ. ಕವಲಿ, ಧಾರವಾಡ.

೩) ಭಾರತದ ಹಬ್ಬಹರಿದಿನಗಳು : ಪ್ರೊ. ಡಿ. ಟಿ. ರಂಗಸ್ವಾಮಿ, ಚಿತ್ರದುರ್ಗ.

೪) ಹಬ್ಬ ಹುಣ್ಣಿವೆಗಳು : ಡಾ. ಪಿ. ಬಿ. ದೇಸಾಯಿ, ಧಾರವಾಡ.

೫) ಭಾರತೀಯ ತ್ಯೋಹಾರ : ಸುರೇಶಚಂದ್ರ ಶರ್ಮಾ

೬) South Indian Festivals of India : By P. V. Jagadish Ayyar

೭) Bhavan's Journals : (1970)	Bharatiya Vidya Bhavan, Bombay-7
೮) Festivals of India :	Department of Tourism, Ministry of Transport and Communication & Govt. of India New Delhi, 1960.

ಉಪನ್ಯಾಸ ಗ್ರಂಥಮಾಲೆಯ ಇತ್ತೀಚಿನ ಪ್ರಕಟಣೆಗಳು

ಬೆಲೆ : ಪ್ರತಿ ಒಂದಕ್ಕೆ ೨೫ ಪೈಸೆ

೧. ಸಾಮಾಜಿಕ ಭದ್ರತೆ —ಎಚ್. ವಿ. ನಾಗೇಶ

೨. ಸಾಮಾಜಿಕ ಸಮಸ್ಯೆಗಳು —ಕೆ. ಜಿ. ಜೋಶಿ

೩, ಕರ್ನಾಟಕದಲ್ಲಿ ನವಶಿಲಾಯುಗ —ಬಾ. ರಾ. ಗೋಪಾಲ್

೪. ಜೀವಾವಶೇಷಗಳು —ಎಂ. ಎಸ್. ಮನ್ನಿಕೇರಿ

೫. ವಿಜಯನಗರ ಕಾಲದ ಧಾರ್ಮಿಕ ಜೀವನ —ಸದ್ಯೋಜಾತ ಸ್ವಾಮೀಜಿ

೬. ಡಾ. ಖೊರಾನಾ ಅವರ ಸಂಶೋಧನೆಗಳು —ಎಚ್. ಕೆ. ಮಲ್ಲಿಕಾರ್ಜುನಪ್ಪಾ

೭. ಸಂಸ್ಕೃತ ಸಾಹಿತ್ಯದಲ್ಲಿ ಹಾಸ್ಯ —ಎಲ್. ಜಿ. ಜೋಶಿ

ವ್ಯಾಸಂಗ ವಿಸ್ತರಣ ಮತ್ತು ಪ್ರಕಟನ ವಿಭಾಗ

ಕರ್ನಾಟಕ ವಿಶ್ವವಿದ್ಯಾಲಯ

ಧಾರವಾಡ – ೩